ಸಂಪುಟ : 8 ಸಂಚಿಕೆ :299 ಪುಟ : 4 ಬೆಲೆ : 3.00 ಮಂಗಳವಾರ ಜನವರಿ 9, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 299 Pages : 4 Price : 3.00 Tuesday JANUARY 9, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಇಂದಿನ ನೀರು ಪೂರೈಕೆ ವಿವರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಜನವರಿ 9ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 15, 16, 17 ಶಹಾಪುರ ಪೇಟೆ, ಡಿಸಿ ಮಿಲ್ ರೋಡ್, ಜವಳಗಲ್ಲಿ, ಮೀನಿನ ಮಾರ್ಕೆಟ್ ರೋಡ್, ಮಹೇಂದ್ರಕರ್ ಸರ್ಕಲ್ ಲೈನ್, ಗಾಂಧಿ ಸರ್ಕಲ್ ಲೈನ್, ಕರ್ನಾಟಕ ಟಾಕೀಸ್ ರೋಡ್, ಶರಣ ಬಸವೇಶ್ವರ ಗುಡಿ ಲೈನ್, ಗಣೇಶ ಗುಡಿ ಲೈನ್.

ವಾರ್ಡ್ ನಂ. 31, 32 ದಾಸರ ಓಣಿ, ಭಜಂತ್ರಿ ಓಣಿ, ಚಿಕ್ಕಲಿಗಾರ ಓಣಿ, ದುರ್ಗಮ್ಮನ ಗುಡಿ ಲೈನ್, ಏಳು ಮಕ್ಕಳ ತಾಯಿ ಗುಡಿ ಲೈನ್, ಪೊಲೀಸ್ ಕ್ವಾರ್ಟರ್ಸ್, ಕೋಳಿಕೇರಿ ಜೀನ್, ಜಂಡಾ ಕಟ್ಟಿ, ಹಳೆ ಕಚೇರಿ ರೋಡ್, ಜೋಡ ಮಾರುತಿ ಗುಡಿ ಲೈನ್, ಗುಜ್ಜರಬಸ್ತಿ ಲೈನ್, ಸುಣಗಾರ ಓಣಿ, ಒಂದನೇ ನಂಬರ್ ಶಾಲೆ, ರಾಚೋಟೇಶ್ವರ ಗುಡಿ ಮುಂದಿನ ಭಾಗ, ಎಚ್ ಡಿ ಎಫ್ ಸಿ ಬ್ಯಾಂಕ್ ಲೈನ್, ತ್ರಿಕೋಟೇಶ್ವರ ಗುಡಿ ರಸ್ತೆಯ ಕೆಲವು ಉಳಿದ ಭಾಗಗಳು.

ವಾರ್ಡ್ ನಂ. 21 ಮುನವಳ್ಳಿ ಪ್ಲಾಟ್, ಕರಿಬಿಷ್ಟಿಯವರ ಲೈನ್, ಕಮತರ ಪ್ಲಾಟ್, ಅಕ್ಕಿಯವರ ಪ್ಲಾಟ್, ಮುಲ್ಲಾ ಲೈನ್. ವಾರ್ಡ್ ನಂ. 22 ಅಮರೇಶ್ವರ ನಗರ, ತಾಜ್ ನಗರ ಪೂರ್ತಿ ಭಾಗಗಳು. ವಾರ್ಡ್ ನಂ. 1 ಎಸ್ ಎಂ ಕೃಷ್ಣ ನಗರ. ವಾರ್ಡ್ ನಂ. 6, 5 ಮಿಸ್ಕಿನ್ ರವರ ಪ್ಲಾಟ್, ಬಾಳಿಕಾಯಿಯವರ ಲೈನ್, ಹೊನ್ನಪ್ಪನವರ ಲೈನ್, ಪಾಟೀಲರವರ ಲೈನ್, ರೇಣುಕಾಚಾರ್ಯ ಕಲ್ಯಾಣ ಮಂಟಪ, ಪಿ ಪಿ ಗುಡಿ ಲೈನ್, ಗಣಪತಿ ಗುಡಿ.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸ್ವಾತಂತ್ರ್ಯ ಪೂರ್ವದಲ್ಲಿ ಬೆಳಗಾವಿ ಮಹಾರಾಷ್ಟ್ರದಲ್ಲಿ ಇತ್ತು: ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿಕೆ ಚರ್ಚೆಗೆ ಗ್ರಾಸ!

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಸ್ವಾತಂತ್ರ್ಯ ಪೂರ್ವದಲ್ಲಿ ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿತ್ತು ಎಂಬ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿಕೆ ರಾಜಕೀಯ ವಲಯದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದೆ.

ಬೆಳಗಾವಿ ಜಿಲ್ಲೆ ನಿಪ್ಪಾಣಿ ತಾಲೂಕಿನ ಕಾರದಗಾ ಗ್ರಾಮದಲ್ಲಿ ಜ. 07ರಂದು ನಡೆದ 6ನೇ ಕನ್ನಡ ಸಮಾವೇಶದಲ್ಲಿ ಭಾಗಿಯಾಗಿದ್ದ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಮಾತಿನ ಭರದಲ್ಲಿ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿತ್ತು ಎಂಬ ಹೇಳಿಕೆ ನೀಡಿದ್ದು, ಸದ್ಯ ಚರ್ಚೆಗೆ ಗ್ರಾಸವಾಗಿದೆ.

ಕನ್ನಡ ಭಾಷೆ ಹಲವು ವರ್ಷಗಳ ಇತಿಹಾಸ ಹೊಂದಿದೆ. ನಮ್ಮ ಸಾಹಿತಿಗಳು ಇದನ್ನು ಸಾಬೀತು ಮಾಡಿದ್ದಾರೆ. ನಮ್ಮ ಕನ್ನಡ ಭಾಷೆಗೆ ಎಂಟು ಜ್ಞಾನಪೀಠ ಪ್ರಶಸ್ತಿಗಳು ಲಭಿಸಿರೋದು ನಮ್ಮ ಹೆಮ್ಮೆ. ನಮ್ಮ ಕನ್ನಡ ಭಾಷೆ ಕಲೆ ಮತ್ತು ಸಂಸ್ಕೃತಿಯಲ್ಲಿ ಶ್ರೀಮಂತವಾಗಿದೆ. ಇಂತಹ ನಾಡಿನಲ್ಲಿ ಜನಿಸಲು ನಾವು ಪುಣ್ಯ ಮಾಡಿರಬೇಕು. ಆದ್ರೆ ಸ್ವಾತಂತ್ರ್ಯ ಪೂರ್ವದಲ್ಲಿ ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿತ್ತು ಎಂದು ಭಾಷಣದ ವೇಳೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿಕೆ ನೀಡಿದ್ದಾರೆ. ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಮಾತುಗಳ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಬೆಳಗಾವಿ ವಿಶಾಲ ಕರ್ನಾಟಕಕ್ಕೆ ಸೇರಿ ಅನೇಕ ವರ್ಷಗಳಾಗಿದೆ. ವೋಟಿನ ರಾಜಕಾರಣಕ್ಕೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿಕೆ ನೀಡಿರುವುದು ವಿಷಾದಕರ. ಕಾಶ್ಮೀರ ಕೂಡ ಪಾಕಿಸ್ತಾನಕ್ಕೆ ಸೇರಿದ್ದು ಅಂತ ಕಾಂಗ್ರೆಸ್‌ನವರು ಹೇಳುತ್ತಾರೆ. ಸಿಎಂ ಸಿದ್ದರಾಮಯ್ಯ, ಲಕ್ಷ್ಮಿ ಹೆಬ್ಬಾಳ್ಕರ್ ಅವರನ್ನು ಸಚಿವ ಸಂಪುಟದಿಂದ ಹೊರಗೆ ಇಡಬೇಕು. ಹೆಬ್ಬಾಳ್ಕರ್ ಆರೂವರೆ ಕೋಟಿ ಕನ್ನಡಿಗರಿಗೆ ಅವಮಾನ ಮಾಡಿದ್ದಾರೆ. ಬೆಳಗಾವಿ ಕರ್ನಾಟಕಕ್ಕೆ ಸೇರಿದ್ದು. ಹಾಗಾಗಿಯೇ ಬೆಳಗಾವಿ ಅಧಿವೇಶನ ಮಾಡಲಾಗುತ್ತಿದೆ. ಅವರ ಹೇಳಿಕೆ ಬೇರೆಯವರನ್ನು ಕೆರಳಿಸಲಿದೆ ಎಂದು ಬೆಂಗಳೂರಿನಲ್ಲಿ ಶಾಸಕ ಎಸ್.ಆರ್. ವಿಶ್ವನಾಥ್ ಆಕ್ರೋಶ ಹೊರ ಹಾಕಿದರು.

### ಲಕ್ಷ್ಮೇಶ್ವರದ ಸೂರಣಗಿಯ ಮೃತ ಅಭಿಮಾನಿಗಳ ಮನೆಗೆ ತೆರಳಿ ಕುಟುಂಬದವರಿಗೆ ಸಾಂತ್ವನ ಹೇಳಿದ ನಟ ಯಶ್

# ಇಂತಹ ಹುಚ್ಚು ಅಭಿಮಾನ ಬಿಟ್ಟುಬಿಡಿ

■ವಿಜಯಸಾಕ್ಷಿ ಸುದ್ದಿ, ಗದಗ

ಯಾವ ಸೆಲೆಬ್ರಿಟಿಯೂ ಕೂಡ ಇದನ್ನು ಇಷ್ಟಪಡುವುದಿಲ್ಲ. ಇಂತಹ ಘಟನೆಗಳು ಸಂಭವಿಸಬಹುದು ಎಂದೇ ನಾನು ಸರಳವಾಗಿ ಜನ್ಮದಿನ ಆಚರಿಸಲು ತಿರ್ಮಾನ ಮಾಡಿದ್ದೆ. ಆದರೆ, ಯಾವ ಘಟನೆ ಸಂಭವಿಸಬಾರದಿತ್ತೋ ಅದು ಘಟಿಸಿಹೋಗಿದೆ. ಈಗ ಅದನ್ನೆಲ್ಲಾ ಮಾತನಾಡುವ ಸಮಯವಲ್ಲ. ಮೃತ ಯುವ ಅಭಿಮಾನಿಗಳ ಕುಟುಂಬಕ್ಕೆ ಏನು ಅಗತ್ಯವೋ ಅದನ್ನು ಮಾಡುತ್ತೇವೆ ಎಂದು ಕನ್ನಡ ಚಿತ್ರರಂಗದ ಖ್ಯಾತ ನಟ ಯಶ್ ಕಂಬನಿ ಮಿಡಿದರು.

ಚಿತ್ರನಟ ಯಶ್ ಜನ್ಮದಿನದ ಹಿನ್ನೆಲೆಯಲ್ಲಿ ಬೃಹತ್ ಕಟೌಟ್ ಅಳವಡಿಸುವ ವೇಳೆ ಅಚಾತುರ್ಯದಿಂದ ವಿದ್ಯುತ್ ಸ್ಪರ್ಶವಾಗಿ ಭಾನುವಾರ ಮೂವರು ಹುಚ್ಚು ಅಭಿಮಾನಿಗಳು ಸ್ಥಳದಲ್ಲಿಯೇ ಸಾವನ್ನಪ್ಪಿ, ಮೂವರು ಆಸ್ಪತ್ರೆ ಸೇರಿದ ದಾರುಣ ಘಟನೆಯ ಸುದ್ದಿ ತಿಳಿದ ನಟ ಯಶ್ ಸೋಮವಾರ ಲಕ್ಷ್ಮೇಶ್ವರ ತಾಲೂಕಿನ ಸೂರಣಗಿ ಗ್ರಾಮದ ಮೃತರ ಕುಟುಂಬವನ್ನು ಭೇಟಿ ಮಾಡಿ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳು ಅಭಿಮಾನಿಗಳನ್ನು ಮಾತನಾಡಿಸಿ, ಸಾಂತ್ವನ ಹೇಳಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

ನಾನು ಇಲ್ಲಿ ಬಂದಿರುವುದು ದುರ್ಘಟನೆಯಲ್ಲಿ ಮೃತರಾದ ನನ್ನ ಅಭಿಮಾನಿಗಳ ತಂದೆ-ತಾಯಿಗಳಿಗೆ ಸಾಂತ್ವನ ಹೇಳಲು. ಅವರ ಕುಟುಂಬಕ್ಕೆ ಏನು ಅಗತ್ಯವೋ ಅದನ್ನು ಮಾಡುತ್ತೇನೆ. ಅಭಿಮಾನ ತೋರಿಸುವುದಾದರೆ ನಿಮ್ಮ ಬದುಕಲ್ಲಿ ಖುಷಿಯಾಗಿರಿ. ನಮ್ಮ ಬಗ್ಗೆ ಯೋಚನೆ ಮಾಡಬೇಡಿ, ನೀವು ಖುಷಿಯಾಗಿರಿ. ನಿಮ್ಮೆಲ್ಲರಲ್ಲೂ ಕೈ ಮುಗಿದು ಕೇಳಿಕೊಳ್ಳುತ್ತೇನೆ, ಇದೆಲ್ಲಾ ಬಿಟ್ಟುಬಿಡಿ. ಈ ರೀತಿಯಲ್ಲಿ ಅಭಿಮಾನ ವ್ಯಕ್ತಪಡಿಸಬೇಕೆಂದು ಯಾರೂ ಬಯಸುವುದಿಲ್ಲ, ಇಷ್ಟ ಪಡುವುದಿಲ್ಲ. ನನಗಂತೂ ಇಂತಹ ಅಭಿಮಾನ ಬೇಡವೇ ಬೇಡ.

ಬೈಕ್‌ನಲ್ಲಿ ಚೇಸ್ ಮಾಡಿಕೊಂಡು ಬರುವುದು, ಹುಚ್ಚು ಹುಚ್ಚಾಗಿ ಅಭಿಮಾನ ತೋರ್ಪಡಿಸುವುದು ಇಂಥವೆಲ್ಲಾ ದಯವಿಟ್ಟು ಬೇಡ. ಈಗ ನಾನು ಇಲ್ಲಿಗೆ ಬರುವಾಗಲೂ ಕೆಲವರು ಬೈಕ್‌ನಲ್ಲಿ ಹಿಂಬಾಲಿಸಿ ಬರುತ್ತಿದ್ದರು. ಕಟೌಟ್ ಕಟ್ಟಬೇಡಿ ಅಂದರೆ ಬೇಜಾರು ಮಾಡಿಕೊಳ್ತೀರಿ.

▶▶3ನೇ ಪುಟಕ್ಕೆ



ಪ್ರತಿವರ್ಷ ಜ.8ರಂದು ನಟ ಯಶ್ ಅವರ ಜನ್ಮದಿನಾಚರಣೆಯನ್ನು ಸೂರಣಗಿ ಗ್ರಾಮದಲ್ಲಿ ಅವರ ಅಭಿಮಾನಿಗಳು ವಿಜೃಂಭಣೆಯಿಂದ ಆಚರಿಸುತ್ತಾರೆ. ಈ ಹಿನ್ನೆಲೆಯಲ್ಲಿ ಹಿಂದಿನ ದಿನ ರಾತ್ರಿಯೇ ಗ್ರಾಮದ 8-10 ಜನ ಯುವಕರು ಪ್ರಮುಖ ಸ್ಥಳದಲ್ಲಿ ಯಶ್ ಅವರ 20 ಅಡಿ ಎತ್ತರದ ಕಟೌಟ್ ಕಟ್ಟುವ ಕಾರ್ಯದಲ್ಲಿ ತೊಡಗಿದ್ದರು. ಕಬ್ಬಿಣದ ಫ್ರೇಮ್ ಹೊಂದಿದ್ದ ಕಟೌಟ್ ವಿದ್ಯುತ್ ತಂತಿಗೆ ತಗುಲಿದ್ದರಿಂದ ಭಾನುವಾರ ರಾತ್ರಿ ಈ ಘಟನೆ ಸಂಭವಿಸಿತ್ತು.

ಸೂರಣಗಿ ಗ್ರಾಮದ ಹನಮಂತ ಮಜ್ಜೂರಪ್ಪ ಹರಿಜನ(20), ಮುರಳಿ ನೀಲಪ್ಪ ನಡುವಿನಮನಿ(20) ನವೀನ ನೀಲಪ್ಪ ಹರಿಜನ(20) ಈ ದುರ್ಘಟನೆಯಲ್ಲಿ ಮೃತಪಟ್ಟ ದುರ್ದೈವಿಗಳಾಗಿದ್ದರೆ, ಹನಮಂತ ಹರಿಜನ, ಪ್ರಕಾಶ ಮ್ಯಾಗೇರಿ, ಮಂಜು ಹರಿಜನ ಗಾಯಗೊಂಡಿದ್ದಾರೆ. ಭಾನುವಾರ ರಾತ್ರಿ ಲಕ್ಷ್ಮೇಶ್ವರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಸೋಮವಾರ ಬೆಳಿಗ್ಗೆ ಜಿಮ್ಸ್‌ಗೆ ದಾಖಲಿಸಲಾಗಿದ್ದು, ಗಾಯಾಳುಗಳೆಲ್ಲರೂ ಚೇತರಿಸಿಕೊಂಡಿದ್ದಾರೆ.



# ಕರ್ನಾಟಕ ದರ್ಶನ ಪ್ರವಾಸಕ್ಕೆ ಎಸ್.ವಿ.ಸಂಕನೂರ ಚಾಲನೆ

■ವಿಜಯಸಾಕ್ಷಿ ಸುದ್ದಿ, ಗದಗ

ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ಆಯೋಜಿಸಲಾದ 'ಕರ್ನಾಟಕ ದರ್ಶನ' ಮಕ್ಕಳ ಪ್ರವಾಸಕ್ಕೆ ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಗದಗ ನಗರದ ಮುನ್ಸಿಪಲ್ ಪ್ರೌಢಶಾಲೆಯ ಆವರಣದಲ್ಲಿ ಸೋಮವಾರ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಪ್ರವಾಸೋದ್ಯಮ ಇಲಾಖೆಯಿಂದ ಮಕ್ಕಳಿಗೆ ಕರ್ನಾಟಕದ ಪ್ರಮುಖ ಶೈಕ್ಷಣಿಕ ಪ್ರವಾಸಿ ತಾಣಗಳ ಪರಿಚಯವನ್ನು ಈ ಪ್ರವಾಸದಿಂದ ಮಾಡಿಸುವ ಸದುದ್ದೇಶ ಹೊಂದಿದೆ. ಮಕ್ಕಳು ತಮ್ಮ ಶಾಲಾ ಶೈಕ್ಷಣಿಕ ಅವಧಿಯಲ್ಲಿ ರಾಜ್ಯದ ಪ್ರವಾಸ ಕೈಗೊಳ್ಳುವ ಮೂಲಕ ಮುಂದಿನ ಕಲಿಕೆಗೆ ಈ ಪ್ರವಾಸ ಸಹಕಾರಿಯಾಗಲಿ ಎಂದರು. ಪ್ರಸಕ್ತ ಸಾಲಿನ 8ನೇ ತರಗತಿಯ ವಿದ್ಯಾರ್ಥಿಗಳು ಪ್ರವಾಸ ಕೈಗೊಳ್ಳುತ್ತಿದ್ದು, ಪ್ರವಾಸವು ವಿದ್ಯಾರ್ಥಿಗಳಿಗೆ ಉತ್ತಮ ಅನುಭವವನ್ನು ನೀಡಲಿ ಎಂದು ಶುಭ ಕೋರಿದರು.

ಈ ಸಂದರ್ಭದಲ್ಲಿ ನಗರಸಭೆ ಮಾಜಿ ಅಧ್ಯಕ್ಷ ಬಿ.ಬಿ. ಅಸೂಟಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಎಂ.ಎ. ರಡ್ಡೇರ, ಸಮನ್ವಯಾಧಿಕಾರಿ ಜೆ.ಎ. ಬಾವಿಕಟ್ಟಿ, ದೈಹಿಕ ಶಿಕ್ಷಣ ಅಧಿಕಾರಿ ಪವಾರ, ವಣಿಕ್ಯಾಲ್ ಹಾಗೂ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಕೊಟ್ರೇಶ ವಿಭೂತಿ ಸೇರಿದಂತೆ ಸಾರ್ವಜನಿಕರು, ಮಕ್ಕಳು ಹಾಜರಿದ್ದರು.



### ಜಿಲ್ಲಾ ಕಸಾಪ ವತಿಯಿಂದ ಅಯ್ಯಪ್ಪ ಸೋಮಪ್ಪ ಸಜ್ಜನರ ದತ್ತಿ ಉಪನ್ಯಾಸ ಕಾರ್ಯಕ್ರಮ

# ಬೇಂದ್ರೆ ಕಾವ್ಯದಿಂದ ಹೊಸ ಅನುಭೂತಿ




■ವಿಜಯಸಾಕ್ಷಿ ಸುದ್ದಿ, ಗದಗ

ಬೇಂದ್ರೆ ಅವರು ತಮ್ಮ ಕೃತಿಗಳಲ್ಲಿ ವೈವಿಧ್ಯಮಯವಾದ ವಿಷಯಗಳನ್ನು ವಿಶಿಷ್ಠ ರೀತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಶಾಸ್ತ್ರೀಯ, ಸಂಪ್ರದಾಯಿಕ ಶೈಲಿ, ಗ್ರಾಮೀಣ, ಜಾನಪದ ಸಾಹಿತ್ಯ ಭಾಷೆಯನ್ನು ಸಮೃದ್ಧವಾಗಿ ಬಳಸಿ ಹೊಸ ನುಡಿಗಟ್ಟಿನ ಮೂಲಕ ಓದುಗರ ಗಮನ ಸೆಳೆದಿದ್ದಾರೆ. ತಮ್ಮ ಬದುಕಿನ ಜಂಜಡಗಳಿಂದುಟಾದ ಶೋಕವನ್ನು ಶ್ಲೋಕವನ್ನಾಗಿ ಕಾವ್ಯಮಯಗೊಳಿಸಿದ್ದಾರೆಂದು ಗದುಗಿನ ಎಚ್‌ಸಿ ಇಎಸ್ ಪದವಿ ಮಹಾವಿದ್ಯಾಲಯದ ಪ್ರಾಧ್ಯಾಪಕಿ ಜಿ.ಎಫ್. ಕಾಯಕದ ನುಡಿದರು.

ಅವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ತೋಂಟದ ಸಿದ್ಧಲಿಂಗಶ್ರೀಗಳ ಕನ್ನಡ ಭವನ ಕಸಾಪ ಕಾರ್ಯಾಲಯದಲ್ಲಿ ಏರ್ಪಡಿದ್ದ ಅಯ್ಯಪ್ಪ ಸೋಮಪ್ಪ ಸಜ್ಜನರ ದತ್ತಿ ಉಪನ್ಯಾಸದಲ್ಲಿ ಬೇಂದ್ರೆ ಬದುಕು ಬರಹ ಕುರಿತು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾದ ಕಾವ್ಯನೆಲೆಯನ್ನು ಕಟ್ಟಿಕೊಟ್ಟವರು ಬೇಂದ್ರೆಯವರು. ಅವರ ಕವಿತೆಗಳನ್ನು ಓದಿದಾಗ ಸಹೃದ ವಿಶಿಷ್ಠ ಅನುಭೂತಿಗೆ ಒಳಗಾಗುತ್ತಾನೆ ಎಂದರು.

▶▶3ನೇ ಪುಟಕ್ಕೆ

### ಹೂವಿನ ಶಿಗ್ಲಿ ಮಠದ ಜಾತ್ರಾಮಹೋತ್ಸವ ಮತ್ತು ಲಿಂ. ನಿರಂಜನ ಮಹಾಸ್ವಾಮಿಗಳ ಪುಣ್ಯಾರಾಧನೆ

# ಮಠದ ಭಕ್ತರಲ್ಲಿ ಸೇವಾ ಭಾವನೆಯಿರಲಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಭಕ್ತರು ನೀಡುವ ತನು, ಮನ, ಧನದ ಸಹಾಯ-ಸಹಕಾರದಿಂದಲೇ ನಾಡಿನ ಮಠಮಾನ್ಯಗಳಲ್ಲಿ ತ್ರಿವಿಧ ದಾಸೋಹ ಸೇವೆ ಸಾಧ್ಯವಾಗುತ್ತಿದೆ. ಭಕ್ತರ ಈ ಸೇವಾ ಮನೋಭಾವ ಸದಾ ಹೀಗೆಯೇ ಇರಲಿ. ನಾಡಿನಲ್ಲಿ ಗುರುಕುಲ ಪದ್ಧತಿಯ ಶಿಕ್ಷಣ, ಪರಂಪರೆ ಮುಂದುವರೆಯಲಿ ಎಂದು ಶಿರಹಟ್ಟಿಯ ಶ್ರೀ ಫಕೀರ ಸಿದ್ಧರಾಮ ಜಗದ್ಗುರುಗಳು ಹೇಳಿದರು.

ಸಮೀಪದ ಹೂವಿನ ಶಿಗ್ಲಿ ಮಠದ ಜಾತ್ರಾಮಹೋತ್ಸವ ಮತ್ತು ಲಿಂ. ನಿರಂಜನ ಮಹಾಸ್ವಾಮಿಗಳ ಪುಣ್ಯಾರಾಧನೆ ನಿಮಿತ್ತ ಶ್ರೀಮಠದಲ್ಲಿ ನಡೆಸುತ್ತಿರುವ ಶಿರಹಟ್ಟಿ ಫಕೀರೇಶ್ವರ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ತುಲಾಭಾರ ಗೌರವ ಸ್ವೀಕರಿಸಿ ಶ್ರೀಗಳು ಆಶೀರ್ವಚನ ನೀಡಿದರು.

ತುಲಾಭಾರ ಸೇವೆಯಿಂದ ಮಠಮಾನ್ಯಗಳ ತ್ರಿವಿಧ ದಾಸೋಹ ಸೇವೆಗೆ ಸಹಾಯವಾಗುತ್ತದೆಯಲ್ಲದೇ ಸೇವಾ ಫಲ ಶ್ರೇಷ್ಠವಾಗಿರುತ್ತದೆ. ತಾವು ಕಬ್ಬಿಣದ ತಕ್ಕಡಿಯಲ್ಲಿ ಕುಳಿತಿಲ್ಲ, ಭಕ್ತರ ಹೃದಯದ ತಕ್ಕಡಿಯಲ್ಲಿ ಕುಳಿತಿದ್ದೇವೆ. ಶಿರಹಟ್ಟಿಯ ಫಕೀರೇಶ್ವರ ಜಗದ್ಗುರುಗಳು ನಾಡಿಗೆ ನೀಡಿದ 'ದ್ವೇಷ ಬಿಡು-ಪ್ರೀತಿ ಮಾಡು' ವಿಶ್ವ ಮಾನವ ಸಂದೇಶ ಪಾಲನೆಯಿಂದ ಸಮಾಜದಲ್ಲಿ ಸದಾ ಶಾಂತಿ, ಪ್ರೀತಿ, ಸೌಹಾರ್ದತೆ ನೆಲೆಸುತ್ತದೆ. ಮಠ ಮಾನ್ಯಗಳು ಸಮಾಜವನ್ನು ಸನ್ಮಾರ್ಗದಲ್ಲಿ ನಡೆಸುವ ಶಕ್ತಿ ಕೇಂದ್ರಗಳಾಗಿವೆ. ಲಿಂ. ನಿರಂಜನ ಶ್ರೀಗಳು ನಮ್ಮೊಂದಿಗೆ ಅಪಾರ ಸ್ನೇಹ ಅಭಿಮಾನವನ್ನು ಹೊಂದಿದ್ದರು. ಈ ಅಭಿಮಾನ, ಭಕ್ತಿ ಸದಾ ಹೀಗೇಯೇ ಇರಲಿ ಎಂದರು.

ಮಠಾಧ್ಯಕ್ಷರಾದ ಚನ್ನವೀರ ಮಹಾಸ್ವಾಮಿಗಳ ನೇತೃತ್ವದಲ್ಲಿ ಅಪಾರ ಭಕ್ತ ಸಮೂಹದ ಜಯಘೋಷದೊಂದಿಗೆ ಶಿರಹಟ್ಟಿ ಜಗದ್ಗುರುಗಳ ತುಲಾಭಾರ ನೆರವೇರಿತು. ಭಕ್ತರಾದ ನಿಂಗಪ್ಪ ಹೆಬಸೂರ, ಅಂದಾನಯ್ಯ ಹಿರೇಮಠ, ದೇವಪ್ಪ ಸಣ್ಣಬಾಳಪ್ಪನವರ, ನಿಂಗಪ್ಪ ರಾಯಮ್ಮನವರ, ರಾಮನಗೌಡ ಲಕ್ಷ್ಮೇಶ್ವರ, ನಾಗರಾಜ ತೋಟರ(ಮಾಗಡಿ), ನಿಂಗಪ್ಪ ಕಾಗಿ, ಮಂಜು ಅತ್ತಿಗೇರಿ, ಭರಮಣ್ಣ ಬಿದರಿ, ಮುತ್ತು ರಾಯಮ್ಮನವರ, ಶಿವಾನಂದ ಕಟ್ಟಿಮನಿ ಸೇರಿದಂತೆ ಹೂವಿನಶಿಗ್ಲಿ, ಹೊನ್ನಿಕೊಪ್ಪ, ನಾಯಿಕೆರೂರ, ವಡ್ನಿಕೊಪ್ಪ, ಹಾಲಗಿ-ಮರೂಳ, ಸೋನಾಳ(ಬೀದರ ಜಿಲ್ಲೆ) ಗ್ರಾಮಗಳ ಭಕ್ತರು ಪಾಲ್ಗೊಂಡಿದ್ದರು. ಗವಿಸಿದ್ದೇಶ್ವರ ಶಾಸ್ತ್ರಿಗಳು, ಪುಟ್ಟರಾಜ ಶಾಸ್ತ್ರಿಗಳು ರವಿಕುಮಾರ ಇದ್ದರು.



## ಸಾಕ್ಷಿ ಸುಭಾಷಿತ

ವಿದ್ಯೆ ಎಂಬುದು ಮನುಷ್ಯನಿಗೆ
ದೊಡ್ಡ ಗುಣ, ಗೌಪ್ಯವಾದ ನಿಧಿ

–ಸುಭಾಷಿತ

## ಸಂಪಾದಕೀಯ

### ಮತಕ್ಕಾಗಿ ಇತಿಹಾಸಕ್ಕೆ ಮಸಿ ಬಳಿಯುವ ಕೆಲಸ ಸಲ್ಲದು

ಬೆಳಗಾವಿ ಸ್ವಾತಂತ್ರ್ಯ ಪೂರ್ವ ಮಹಾರಾಷ್ಟ್ರಕ್ಕೆ ಸೇರಿದ್ದು ಎನ್ನುವ ಮೂಲಕ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಹಾಗೂ ಬೆಳಗಾವಿ ಗ್ರಾಮೀಣ ಕ್ಷೇತ್ರದ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಭಾಷಾ ಕಿಡಿ ಹೊತ್ತಿಸಿದ್ದಾರೆ.

ತಮ್ಮನ್ನು ತಾವು ಆಧುನಿಕ ಕಿತ್ತೂರು ಚನ್ನಮ್ಮ ಎಂದೇ ಭಾವಿಸಿಕೊಂಡಿರುವ ಲಕ್ಷ್ಮೀ ಹೆಬ್ಬಾಳ್ಕರ್ ಯಾವ ಇತಿಹಾಸದ ಪುಸ್ತಕವನ್ನು ಓದಿಕೊಂಡು ಈ ಹೇಳಿಕೆ ನೀಡಿದ್ದಾರೊ ಗೊತ್ತಿಲ್ಲ. ಆದರೆ ತಾವೊಬ್ಬರು ರಾಜ್ಯ ಸರ್ಕಾರದ ಮಂತ್ರಿ ಎನ್ನುವುದನ್ನು ಮರೆತು ಇಂತಹ ಹೇಳಿಕೆ ನೀಡಿದ್ದಾರೆ.

ಅಷ್ಟಕ್ಕೂ ಬೆಳಗಾವಿ ಮಹಾರಾಷ್ಟ್ರದ ಭಾಗವಾಗಿತ್ತು ಎನ್ನುವುದಕ್ಕೆ ಯಾವುದೇ ದಾಖಲೆಗಳಿಲ್ಲ. 2500 ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಭಾಷೆ ಮತ್ತು ಆಡಳಿತದ ಅವಧಿಯ ಬಗ್ಗೆ ಕನಿಷ್ಠ ಜ್ಞಾನವೂ ಇಲ್ಲದೇ ಲಕ್ಷ್ಮೀ ಹೆಬ್ಬಾಳ್ಕರ್, ಈ ರೀತಿ ಹೇಳಿಕೆ ನೀಡಿದ್ದು ಕೇವಲ ಮತಬ್ಯಾಂಕ್ ಓಲೈಕೆಗೆ ಎನ್ನುವುದು ಎಲ್ಲರಿಗೂ ಗೊತ್ತಿದೆ.

ಬೆಳಗಾವಿ ಗ್ರಾಮೀಣ ಕ್ಷೇತ್ರದಲ್ಲಿ ಮರಾಠಿ ಭಾಷಿಕರ ಪ್ರಭಾವ ಹೆಚ್ಚಾಗಿದೆ. ಗ್ರಾಮೀಣ ಕ್ಷೇತ್ರದಲ್ಲಿ ಗೆಲುವು ಸಾಧಿಸಬೇಕಾದರೆ, ಮರಾಠಿ ಬಾಷಿಕರ ಬೆಂಬಲ ಮತ್ತು ಮತ ಅತ್ಯಗತ್ಯ. ಆ ಕಾರಣಕ್ಕಾಗಿ ಲಕ್ಷ್ಮೀ ಹೆಬ್ಬಾಳ್ಕರ್ ಅವಕಾಶ ಸಿಕ್ಕಾಗಲೆಲ್ಲಾ ಮರಾಠಿ ಪ್ರೀತಿ ತೋರ್ಪಡಿಸುವುದು ಸರ್ವೇ ಸಾಮಾನ್ಯವಾಗಿದೆ.

ಕರ್ನಾಟಕ ಮಹಾರಾಷ್ಟ್ರ ಗಡಿ ವಿಚಾರ ಸುಪ್ರೀಂಕೋರ್ಟ್ ಅಂಗಳದಲ್ಲಿ ಇರುವಾಗ, ಸರಕಾರದ ಭಾಗವಾಗಿ ಲಕ್ಷ್ಮೀ ಹೆಬ್ಬಾಳ್ಕರ್ ಬೆಳಗಾವಿ ಕರ್ನಾಟಕಕ್ಕೆ ಸೇರಿದ್ದು ಎಂದು ಪ್ರತಿಪಾದಿಸಬೇಕಿತ್ತು. ಆದರೆ ಮತ ಬ್ಯಾಂಕ್ ಆಸೆಗಾಗಿ ಇತಿಹಾಸಕ್ಕೆ ಮಸಿ ಬಳಿಯುವ ಕೆಲಸಕ್ಕೆ ಸಚಿವೆ ಮುಂದಾಗಿರುವುದು ಸರಿಯಲ್ಲ.

### ಏಳಿ, ಎದ್ದೇಳಿ ವಿದ್ಯಾರ್ಥಿಗಳೇ! ಭವಿಷ್ಯ ಬರೆದುಕೊಳ್ಳುವ ಸಮಯ ಬರುತ್ತಿದೆ


# ಓದುವುದೇ ನಿಮ್ಮ ಧ್ಯಾನವಾಗಿರಲಿ

ವರಕವಿ ಬೇಂದ್ರೆ ಅವರ ಮಾತಿನಂತೆ, ಮಲಗುವುದಂತೂ ಇದ್ದೇ ಇರುತ್ತದೆ. ಆಲಸ್ಯತನವೆಂಬುದು ಯಾರಿಗಿಲ್ಲ ಹೇಳಿ, ಅದು ಎಲ್ಲರಿಗೂ ಅಂಟಿದ ಶಾಪವೆಂದೇ ಹೇಳಬಹುದು. ನಿದ್ದೆ ಎಂಬುದು ಆಲಸಿಗಳಿಗೆ ಅಮೃತದಂತೆ. ಆದರೆ ಸಾಧಕರಾದವರು ಮತ್ತು ಸಾಧಿಸಬೇಕೆಂದವರು ನಿದ್ದೆಯಿಂದ ಎದ್ದು ಬಂದಾಗಲೇ ಅವರಿಂದ ಸಾಧನೆ ಸಾಧ್ಯ. ಜಗವೆಲ್ಲ ಮಲಗಿರಲು ಬುದ್ಧನೊಬ್ಬನೇ ಎದ್ದ ಎನ್ನುವಂತೆ ನಾವು ಎದ್ದೇಳಬೇಕಾಗಿದೆ. ಸದಾ ಟಿವಿಯ ಮುಂದೆ ಕುಳಿತುಕೊಳ್ಳುವ, ಮೊಬೈಲ್ ಹಿಡಿದುಕೊಂಡು ಚಾಟ್ ಮಾಡುವ, ಸುಮ್ಮನೆ ಕುಳಿತುಕೊಂಡು ಹರಟೆ ಹೊಡೆಯುವ ನಾವು, ಮಲಗಿದರೆ ಕುಂಭಕರ್ಣನಂತೆ ಮಲಗುವುದು ನಾವು ಹೀಗೆ ಸುಮ್ಮನೆ ಕಾಲಹರಣ ಮಾಡುವುದು ಎಷ್ಟು ಸಮಂಜಸ ಎನ್ನುವ ಚಿಂತನೆ ವಿದ್ಯಾರ್ಥಿಗಳದ್ದಾಗಬೇಕಿದೆ. ಸ್ವಾಮಿ ವಿವೇಕಾನಂದರು 'ಸತ್ತಮೇಲೆ ಮಲಗುವುದು ಇದ್ದೇ ಇದೆ, ಈಗ ಎದ್ದು ಸಾಧಿಸಿರಿ' ಎನ್ನುತ್ತಾರೆ.

ಹಿಂದಿನ ಕಾಲದಲ್ಲಿ ಯುದ್ಧದ ಸಮಯ ಬಂದರೆ ಅದರ ತಯಾರಿ ಬಲು ಜೋರಾಗಿರುತ್ತಿತ್ತು. ಖಡ್ಗ, ಗುರಾಣಿ, ಫಿರಂಗಿ ಮುಂತಾದವುಗಳ ಜೊತೆಗೆ ಯುದ್ಧ ಕೌಶಲ್ಯಗಳನ್ನು ಕಲಿತುಕೊಂಡು ರಣರಂಗದಲ್ಲಿ ಗೆದ್ದು ಬೀಗುವಂತೆ, ವಿದ್ಯಾರ್ಥಿಗಳಿಗೆ ಪರೀಕ್ಷೆ ಎಂಬುದು ದೊಡ್ಡ ಯುದ್ಧ ಭೂಮಿ, ಅಲ್ಲಿ ಹೋರಾಡಬೇಕು ಎಂಬುದೇನಿಲ್ಲ. ಆದರೆ ನಿರಂತರವಾದ ಅಧ್ಯಯನ ಮಾಡುತ್ತ ಸಾಗಿದರೆ ಉತ್ತೀರ್ಣರಾಗುವುದು ಹಾಗೂ ಉತ್ತಮ ಅಂಕ ಪಡೆಯುವುದು ಕಷ್ಟವೇನಲ್ಲ.

ಕಷ್ಟಪಟ್ಟು ಓದುವುದಕ್ಕಿಂತ ಇಷ್ಟಪಟ್ಟು ಓದುವ ಹವ್ಯಾಸವನ್ನು ರೂಢಿಸಿಕೊಳ್ಳಬೇಕು. ನಕಲು ಮಾಡಿ ಬರೆಯುವ ಪರೀಕ್ಷೆಯಿಂದ ಬಂದ ಅಂಕಗಳು ಭಿಕ್ಷೆ ಬೇಡಿ ಪಡೆದಂತಹ ಅನ್ನ, ಹಣಕ್ಕೆ ಸಮಾನ ಎಂಬ ಅರಿವು ಹೊಂದಿ, ಸ್ವಂತ ಪ್ರಯತ್ನದಿಂದಲೇ ಪರೀಕ್ಷೆಯನ್ನು ಎದುರಿಸುವ ಮನೋಬಲವನ್ನು ಬೆಳೆಸಿಕೊಳ್ಳಬೇಕಾಗಿದೆ.

ದೇವರ ಸಮಾನರಾದ ತಂದೆ-ತಾಯಿ ಶ್ರಮಪಟ್ಟು ದುಡಿದು



ನಮಗೆ ಅನ್ನ ಹಾಕುವುದಿಲ್ಲವೇ? ಅದೇ ರೀತಿ ನಾವು ಪ್ರಯತ್ನಪಟ್ಟು ತುಂಬಾ ಶ್ರಮವಹಿಸಿ ಸ್ವಂತ ಅಭ್ಯಾಸದಿಂದಲೇ ಹೆಚ್ಚು ಅಂಕಗಳನ್ನು ಪಡೆದಿದ್ದೇನೆ ಎಂದು ಎದೆ ತಟ್ಟಿಕೊಂಡು ಹೇಳುವ ವಿದ್ಯಾರ್ಥಿಗಳು ನೀವಾಗಬೇಕು. ಪರೀಕ್ಷೆ ಸ್ವಾಭಿಮಾನದ ಪ್ರತೀಕವಾಗಬೇಕಾಗಿದೆ. ದ್ರೋಣಾಚಾರ್ಯರು ತನ್ನೆಲ್ಲ ಶಿಷ್ಯಂದಿರಿಗೆ ಮರದಲ್ಲಿ ಕುಳಿತಿರುವ ಹಕ್ಕಿಯ ಕಣ್ಣಿಗೆ ಬಾಣ ಬಿಡುವಂತೆ ಹೇಳಿ, ಬಿಲ್ಲು ಬಾಣ ಹಿಡಿದ ಎಲ್ಲರಿಗೂ ನಿಮ್ಮ ಕಣ್ಣಿಗೆ ಏನು ಕಾಣುತ್ತದೆ ಎಂದರೆ ಕೆಲವರು ಮರ, ಕೆಲವರು ಹಕ್ಕಿಯ ಕಾಲುಗಳು, ರೆಕ್ಕೆ-ಪುಕ್ಕಗಳು, ಗಿಡದ ಟೊಂಗೆಗಳು, ಎಲೆಗಳು ಎಂದರಂತೆ. ಆದರೆ ಅರ್ಜುನನು ಮಾತ್ರ ನನಗೆ ಹಕ್ಕಿಯ ಅಕ್ಷಿಯನ್ನು ಬಿಟ್ಟು ಮತ್ತೇನೂ ಕಾಣುತ್ತಿಲ್ಲ ಗುರುಗಳೇ ಎಂದು ಹಕ್ಕಿಯ ಕಣ್ಣಿಗೆ ಗುರಿಯಿಟ್ಟು ಯಶಸ್ಸು ಕಂಡು ಗುರುವಿನಿಂದ ಶಹಭಾಷ್ ಎನಿಸಿಕೊಂಡ. ಅಂದರೆ ಮನಸ್ಸು ಯಾವಾಗಲೂ ನಿಮ್ಮ ಗುರಿ, ಉದ್ದೇಶದ ಕಡೆ ಇರಬೇಕು.

ವಿದ್ಯಾರ್ಥಿಗಳೇ, ನೀವು ಓದುವಾಗ ನೂರೆಂಟು ವಿಘ್ನಗಳು ನಿಮ್ಮನ್ನು ಕಾಡುತ್ತವೆ. ಆದರೆ ನಿಮ್ಮ ಮನಸ್ಸು ಸದಾ ಗುರಿಯ ಕಡೆಗೇ ನೆಟ್ಟಿರಬೇಕು. ಮನೆಯ ಬಡತನ, ಅನಾರೋಗ್ಯ, ಮರೆವು, ಹೀಯಾಳಿಕೆ, ದಡ್ಡನೆಂಬ ಹಣೆಪಟ್ಟಿ, ಅಂಗವೈಕಲ್ಯ ಇನ್ನೂ ಮುಂತಾದ ಯಾವುದೇ ಸಮಸ್ಯೆಗಳನ್ನು ಮೆಟ್ಟಿ ನಿಲ್ಲುವಂತಹ ಶಕ್ತಿಯನ್ನು, ಆತ್ಮಬಲವನ್ನು ಹೆಚ್ಚಿಸಿಕೊಳ್ಳಬೇಕು. ಅಂದಾಗಲೇ ಮಾತ್ರ ಸಾಧನೆ ಮಾಡಲು ಸಾಧ್ಯವಾಗುತ್ತದೆ.

ಓದುವ ಸಮಯವೆಂದರೆ ನಿಮ್ಮ ಮನಸ್ಸು ಉಲ್ಲಾಸದಿಂದಿರುವ ಸಮಯವೆಲ್ಲವೂ ಓದುವ ಸಮಯವಾಗಿದೆ. ಕೆಲವರಿಗೆ ಮಧ್ಯ ರಾತ್ರಿಯವರೆಗೆ ಓದುವ ರೂಢಿ ಇದ್ದರೆ, ಇನ್ನೂ ಹಲವರಿಗೆ ಬೆಳಿಗ್ಗೆ ಎದ್ದು ಓದುವ ರೂಢಿ ಇರುತ್ತದೆ. ಆದರೆ ಮೊದಲು ದಿನಕ್ಕೆ 6ರಿಂದ 8 ತಾಸು ನಿದ್ರೆಯನ್ನು ಮಾಡಿ. ಆಗ ಮೆದುಳಿಗೆ ಸಂಪೂರ್ಣ ವಿರಾಮ ಸಿಗುತ್ತದೆ. ನಂತರ ಅಧ್ಯಯನ ಮಾಡಿದರೆ ನೆನಪಿನ ಶಕ್ತಿ ಮತ್ತು ಗ್ರಹಣ ಶಕ್ತಿಯು ಸಹ ವೃದ್ಧಿಯಾಗುತ್ತದೆ ಎಂಬುದು ಮನಃಶಾಸ್ತ್ರಜ್ಞರ ಅಭಿಪ್ರಾಯ.

'ಯದ್ಭಾವಂ ತದ್ಭವತಿ' ನಿಮ್ಮ ಭಾವದಂತೆ ನಿಮ್ಮ ಮನಸ್ಸು ಇರುತ್ತದೆ. ದೃಢ ಸಂಕಲ್ಪ, ಧನಾತ್ಮಕ ಮನೋಭಾವದ ಜೊತೆಗೆ ಓದುವುದೇ ನಿಮ್ಮ ಧ್ಯಾನವಾಗಿರಲಿ. ಫಲಿತಾಂಶದ ಬಗ್ಗೆ ಚಿಂತೆ ಬಿಡಿ. ಹೇಗೆ ಪ್ರಯತ್ನಿಸಬೇಕು ಎಂಬುವಂತಹ ಚಿಂತನೆಯನ್ನು ಮಾಡುತ್ತಾ ಕಲಿಯಿರಿ. ನಿಮಗೆ ಸಿಕ್ಕ ಸಮಯದಲ್ಲಿ ನಿಷ್ಠೆಯಿಂದ ಕೆಲಸ-ಕಾರ್ಯಗಳನ್ನು ಮಾಡುತ್ತಿರಿ. ಪ್ರತಿಫಲದ ಬಗ್ಗೆ ಹೆಚ್ಚು ಚಿಂತಿಸದಿರಿ. ಯಶಸ್ಸಿನ ಮೆಟ್ಟಿಲೆಂದರೆ ಅದು ಸತತ ಪ್ರಯತ್ನವೇ ಆಗಿದೆ. ಡಾ. ಬಿ.ಆರ್. ಅಂಬೇಡ್ಕರರು ಹೇಳಿದಂತೆ 'ಓದಿ, ಓದಿ, ಓದಿ. ಏಕೆಂದರೆ ಈ ಜಗತ್ತು ಹೆದರುವುದು ನಿನ್ನೊಳಗಿನ ಜ್ಞಾನಕ್ಕೆ ಮಾತ್ರ'. ಹೆಚ್ಚು ಅಂಕಗಳನ್ನು ಪಡೆಯುವುದರ ಜೊತೆಗೆ ಜ್ಞಾನವಂತರಾಗಿ.

– ಹನಮಂತ ಭಜಂತ್ರಿ.
ಗಜೇಂದ್ರಗಡ.

# ನಿಮ್ಮ ಮುಂದಿನ ಭವಿಷ್ಯಕ್ಕಾಗಿ ಶ್ರಮಿಸಿ



■ವಿಜಯಸಾಕ್ಷಿ ಸುದ್ದಿ, ಗದಗ

ವಿದ್ಯಾರ್ಥಿನಿಯರು ಪಾಲಕರ, ಗುರುಗಳ ಸಲಹೆಯಂತೆ ತಮ್ಮ ಮುಂದಿನ ಭವಿಷ್ಯಕ್ಕಾಗಿ ನಿರಂತರವಾಗಿ ಅಧ್ಯಯನದಲ್ಲಿ ತೊಡಗಿಸಿಕೊಂಡಾಗ ಉತ್ತಮ ಭವಿಷ್ಯ, ಉದ್ಯೋಗ ನಿಮ್ಮದಾಗಲಿದೆ. ಆ ಹಿನ್ನೆಲೆಯಲ್ಲಿ ದೇಶಪಾಂಡೆ ವಿದ್ಯಾರ್ಥಿಗಳ ಭವಿಷ್ಯ ಕಟ್ಟಲು ಶ್ರಮಿಸುತ್ತಿರುವುದು ಪ್ರಶಂಸನೀಯ ಎಂದು ಪ್ರಾಚಾರ್ಯ ಎಮ್. ಯು. ಹಿರೇಮಠ ಹೇಳಿದರು.

ಗದಗ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಐಕ್ಯುಎಸಿ ಅಡಿ ಮತ್ತು ದೇಶಪಾಂಡೆ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ವಾರ್ಷಿಕ ಸಮ್ಮೇಳನದಲ್ಲಿ ಕಾಲೇಜಿನ ವಿದ್ಯಾರ್ಥಿನಿಯರು ಟಿಸಿಎಚ್ ಕಂಪನಿಯ ಸಂದರ್ಶನದಲ್ಲಿ ಆಯ್ಕೆಯಾಗಿರುವ ಉದ್ಯೋಗಪತ್ರವನ್ನು ವಿತರಿಸಿ ಮಾತನಾಡಿದರು.

ವಿದ್ಯಾರ್ಥಿನಿಯರಿಗೆ ಉದ್ಯೋಗದಲ್ಲಿ ಅನೇಕ ಅವಕಾಶಗಳು ತೆರೆದುಕೊಂಡಿದ್ದು, ಕೌಶ್ಯಲ್ಯವನ್ನು ಬೆಳಸಿಕೊಂಡಾಗ ಮಾತ್ರ ಉತ್ತಮ ಭವಿಷ್ಯ ಹೊಂದಲು ಸಾಧ್ಯ. ಜ್ಞಾನದ ಕೌಶಲ್ಯ ಇದ್ದರೆ ನಿಮ್ಮನ್ನು ಕರೆದು ನೌಕರಿ ಕೋಡುವ ಕಂಪನಿಗಳು ಕೂಡಾ ಇವೆ. ನೀವು ಕೌಶಲ್ಯ ಪಡೆದುಕೊಳ್ಳಲು ದೃಢ ಸಂಕಲ್ಪ ಹೊಂದಲು ಮುಂದಾಗಬೇಕು ಎಂದು ಕರೆ ನೀಡಿದರು.

ಪ್ರೊ. ಎಸ್.ಜಿ. ಕಡ್ಡಿ ಮಾತನಾಡಿ, ವಿದ್ಯಾರ್ಥಿಗಳು ವ್ಯಕ್ತಿತ್ವವನ್ನು ನಿರೂಪಿಸಿಕೊಳ್ಳಬೇಕಾದರೆ ಸ್ಪರ್ಧಾತ್ಮಕ ಯುಗಕ್ಕೆ ತಕ್ಕಂತೆ ನಿರಂತರವಾಗಿ ಅಧ್ಯಯನದಲ್ಲಿ ತೊಡಗಿಸಿಕೊಳ್ಳಬೇಕು. ಆ ಹಿನ್ನೆಲೆಯಲ್ಲಿ ಪ್ರಾಮಾಣಿಕವಾಗಿ ನಿಮ್ಮನ್ನು ಅಧ್ಯಯನದಲ್ಲಿ ತೊಡಗಿಸಿಕೊಳ್ಳಲು ಮುಂದಾಗಬೇಕು ಎಂದು ಹೇಳಿದರು.

ಡಾ. ಪ್ರಕಾಶ ದೇಶಪಾಂಡೆ, ಪ್ರೊ. ಸತಾರ ಬಡೇಖಾನ ಮಾತನಾಡಿದರು. ಕಾರ್ಯಕ್ರಮದಲ್ಲಿ ದೇಶಪಾಂಡೆ ಫೌಂಡೇಶನ್‌ನ ತರಬೇತುದಾರರಾದ ಪಾರ್ವತಿ ಕರಮುಡಿ, ಮಹಮ್ಮದಆರೀಪ ಗೊರಜಿಹಾಳ, ಉಪನ್ಯಾಸಕರು, ಸಿಬ್ಬಂದಿವರ್ಗ, ವಿದ್ಯಾರ್ಥಿನಿಯರು ಇದ್ದರು.

# ಆಯೋಧ್ಯಾ ಮಂತ್ರಾಕ್ಷತೆ, ಕರಪತ್ರ ವಿತರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಅಯೋಧ್ಯಾದಲ್ಲಿ ಜ.22ರಂದು ನಡೆಯಲಿರುವ ಶ್ರೀರಾಮ ಮಂದಿರ ಲೋಕಾರ್ಪಣೆಯ ಐತಿಹಾಸಿಕ ಕಾರ್ಯಕ್ರಮವನ್ನು ಎಲ್ಲರೂ ಕಣ್ತುಂಬಿಕೊಳ್ಳೋಣ ಎಂದು ಆರ್‌ಎಸ್‌ಎಸ್ ಪ್ರಮುಖರಾದ ಅರುಣ ಜಿ. ಹೇಳಿದರು.

ನಗರದ 31ನೇ ವಾರ್ಡಿನ ತ್ರಿಕೂಟೇಶ್ವರ ದೇವಸ್ಥಾನದ ಆವರಣದಲ್ಲಿರುವ ಪಾಂಡು ರಂಗ ವಿಠ್ಠಲ್-ರುಕ್ಮಾಯಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ ನಂತರ ಆಯೋಧ್ಯೆಯಿಂದ ಬಂದ ಮಂತ್ರಾಕ್ಷತೆ ಹಾಗೂ ಕರಪತ್ರವನ್ನು ಮನೆ ಮನೆಗೆ ವಿತರಿಸುವ ಕಾರ್ಯಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ಮಂತ್ರಾಕ್ಷತೆ, ಕರಪತ್ರ ಹಾಗೂ ಕೇಸರಿ ಧ್ವಜವನ್ನು ಎಲ್ಲರೂ ಮನೆ ಮನೆಗೆ ಮುಟ್ಟಿಸಬೇಕು ಮತ್ತು ಅಂದು ನಡೆಯುವ ಐತಿಹಾಸಿಕ ಕಾರ್ಯಕ್ರಮವನ್ನು ಎಲ್ಲರೂ ಕಣ್ತುಂಬಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ನಗರಸಭೆ



ಸದಸ್ಯೆ ಶೈಲಾ ಬಾಕಳೆ, ಹಿರಿಯರಾದ ಪರಶುರಾಮಸಾ ಬದಿ, ಲೋಕನಾಥಸಾ ಬದಿ, ಕೃಷ್ಣಸಾ ಲದ್ವಾ, ನಂದು ಬೇವಿನಕಟ್ಟಿ, ಯಲ್ಲೂಬಾಯಿ ನಿರಂಜನ, ಶ್ರೀಕಾಂತ ಬಾಕಳೆ, ಸುಧೀರ ಕಾಟಿಗರ, ಪರಶುರಾಮ ಮಿಸ್ಕಿನ್, ಸುನಿಲ್ ಮಾನ್ವಿ, ಸುಮಂತ ಪಾಟೀಲ, ನಾಗರಾಜ ಖೋಡೆ, ಶ್ರೀಕಾಂತ ಪವಾರ, ರಾಜೇಶ್ ಖೋಡೆ, ಸುರೇಶ ಲದ್ವಾ, ಪ್ರಕಾಶ ಕಾಟಿಗರ, ಸುನಿಲ್ ಬಸವಾ, ಸರೋಜಾಬಾಯಿ ಶೇಜವಾಡಕರ, ಶೋಭಾ ಬಾಂಡಗೆ ಸೇರಿದಂತೆ ವಾರ್ಡಿನ ಸಾರ್ವಜನಿಕರು ಉಪಸ್ಥಿತರಿದ್ದರು.

# 'ಖಿದ್ಮಾ ಕಾವ್ಯಾಮೃತ' ಕಾರ್ಯಕ್ರಮ ಯಶಸ್ವಿ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಖಿದ್ಮಾ ಫೌಂಡೇಶನ್ ಕರ್ನಾಟಕ ಮತ್ತು ವಿಜಯ ಕಾಲೇಜು ಜಯನಗರ, ಬೆಂಗಳೂರು ಇವರ ಸಹಯೋಗದಲ್ಲಿ ಕರ್ನಾಟಕ ಸುವರ್ಣ ಮಹೋತ್ಸವ ಪ್ರಯುಕ್ತ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಖಿದ್ಮಾ ಕಾವ್ಯಾಮೃತ ಕಾರ್ಯಕ್ರಮ ಭಾನುವಾರ ಬೆಂಗಳೂರಿನ ಜಯನಗರ ವಿಜಯ ಕಾಲೇಜಿನ ಹಸಿರು ಭವನದಲ್ಲಿ ಅದ್ದೂರಿಯಾಗಿ ನಡೆಯಿತು.

ವಿಜಯ ಕಾಲೇಜು ಪ್ರಾಂಶುಪಾಲರಾದ ಪ್ರೊ.ಡಿ. ಆರ್. ಸುಧಾ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಯೂಸಫ್ ಹೆಚ್.ಬಿ. ಸಮಾರಂಭದ ಅಧ್ಯಕ್ಷತೆಯನ್ನು, ಅಶ್ವಿನಿ ಎಸ್.



ಅಂಗಡಿ ಕವಿಗೋಷ್ಠಿಯ ಅಧ್ಯಕ್ಷತೆ ಮತ್ತು ಡಾ. ಬಿ.ಎನ್. ಸುರೇಶ್ ಬಾಬು ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಯ್ಕೆಯಾದ ಕವಿಗಳು ಸ್ವರಚಿತ ಕವನವನ್ನು ವಾಚಿಸಿದರು. ಕರ್ನಾಟಕ ಸುವರ್ಣ ಮಹೋತ್ಸವದ ಪ್ರಯುಕ್ತ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ 'ಖಿದ್ಮಾ ಸೇವಾರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ವಿಜಯ ಕಾಲೇಜು ಉಪ ಪ್ರಾಂಶುಪಾಲರಾದ ಪ್ರೊ. ಎಲ್.ಕೆ. ಶ್ರೀವತ್ಸ, ಖಿದ್ಮಾ ಅಧ್ಯಕ್ಷ ಹಾಶಿಂ ಬನ್ನೂರು, ಕಮಲಾಕ್ಷಿ ಸುರೇಶ್ ಕೌಜಲಗಿ, ಹುಮಾಯೂನ್, ಡಾ. ಆರ್.ಎಸ್. ರವೀಂದ್ರ, ಕೆ.ಶ್ರೀಧರ್ (ಕೆ.ಸಿರಿ), ಡಾ. ಎಮ್.ಎಮ್. ಪೀರಜಾದೆ, ಉಮೇಶ್ ಸಿ.ಎನ್, ಡಾ. ಗಣೇಶ್ ಗಂಗೊಳ್ಳಿ, ವಿನಯ್ ಖಾನ್, ಡಾ. ಜುಬೇದಾ ಎಂ.ಬದಾಮಿ, ಡಾ. ಜ್ಯೋತಿ ಶ್ರೀನಿವಾಸ್, ಸಿನಾನ್ ಇದ್ದಬೆಟ್ಟು, ರಾಧಾಮಣಿ ಎಂ.ಕೋಲಾರ, ಉದಯ್ ಕಿರಣ್ ಬಿ., ಕಿರಣ್ ಕೆ., ಸಂತೋಷ್ ಕುಮಾರ್, ಪೂಜಾ ಸಿ.ಐ ಉಪಸ್ಥಿತರಿದ್ದರು.

ಪ್ರಧಾನ ಕಾರ್ಯದರ್ಶಿ ಅಮಿತಾ ಅಶೋಕ್ ಪ್ರಸಾದ್ ಸ್ವಾಗತಿಸಿದರು. ರಶ್ಮಿತಾ ಸುರೇಶ್ ಜೋಗಿಬೆಟ್ಟು ನಿರೂಪಿಸಿದರು. ಕಾರ್ಯಕ್ರಮದ ಆಯೋಜಕ ಹಾಗೂ ಫೌಂಡೇಶನ್‌ನ ರಾಜ್ಯ ಸಂಚಾಲಕ ಆಮಿರ್ ಬನ್ನೂರು ವಂದಿಸಿದರು.

# ಇಂಗ್ಲಿಷ್ ಕೌಶಲ್ಯ ಕುರಿತು ಉಪನ್ಯಾಸ




■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಐ.ಕ್ಯೂ.ಎ.ಸಿ ಮತ್ತು ಇಂಗ್ಲಿಷ ವಿಭಾಗದ ಸಹಯೋಗದಲ್ಲಿ ವಿಶೇಷ ಉಪನ್ಯಾಸವನ್ನು ಬೆಳಗ್ಗೆ 10 ಗಂಟೆಗೆ ಕಾಲೇಜಿನ ಆಡಿಟೋರಿಯಂ ಹಾಲ್‌ನಲ್ಲಿ ಆಯೋಜಿಸಿತ್ತು. ಸಂಪನ್ಮೂಲ ವ್ಯಕ್ತಿಗಳಾಗಿ ಇರಕಲ್ ಗಡ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕಿ ಶ್ರೀಮತಿ ದಿವ್ಯಾ ಆಗಮಿಸಿದ್ದರು. ಸಮಾರಂಭವನ್ನು ಚಾಲನೆ ಗೊಳಿಸಿ ವಿದ್ಯಾರ್ಥಿಗಳಿಗೆ " ಇಂಗ್ಲಿಷ್ ಕೌಶಲ್ಯಗಳ " ಕುರಿತು ವಿಶೇಷ ಉಪನ್ಯಾಸ ನೀಡಿದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ತಿಮ್ಮಾರೆಡ್ಡಿ ಮೇಟಿ, ಐ. ಕ್ಯೂ.ಎ.ಸಿ ಸಂಯೋಜಕಿ ಡಾ.ಟಿ.ವಿ.ವಾರುಣಿ, ಇಂಗ್ಲೀಷ್ ವಿಭಾಗದ ಮುಖ್ಯಸ್ಥರಾದ .ಶಿವಬಸಪ್ಪ ಮಸ್ಕಿ, ಹಾಗೂ ಹಿರಿಯ ಉಪನ್ಯಾಸಕರಾದ ಶಿವಣ್ಣ , ಲತಾ, ಅನುರಾಧ., ಸುಷ್ಮಾ, ಉಷಾ, ಮಹೇಶ್ ಎಚ್. ಪಾಟೀಲ್, ಚಂದ್ರ ಕಾಂತ, ಶ್ಯಾಮೀದ ಇದ್ದರು.

# ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪರಿಶಿಷ್ಟ ಜಾತಿ ಉಪ ಯೋಜನೆಯಡಿಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತರು ರಾಜ್ಯದ ಪರಿಶಿಷ್ಟ ಜಾತಿ ಯುವಜನರಿಗೆ ನಿರೂಪಣಾ ಮತ್ತು ವಾರ್ತಾ ವಾಚಕರ ತರಬೇತಿ ಶಿಬಿರವನ್ನು ಯುವನಿಕಾ ಸಭಾಂಗಣ ಬೆಂಗಳೂರು ಇಲ್ಲಿ ಹಮ್ಮಿಕೊಳ್ಳಲಾಗಿದೆ.

ಅರ್ಹ ಪರಿಶಿಷ್ಟ ಯುವಜನರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ತರಬೇತಿಯು ಜನವರಿ 31 ರಿಂದ ಫೆಬ್ರುವರಿ 7ರವರೆಗೆ ನಡೆಯಲಿದೆ.

15ರಿಂದ 29 ವರ್ಷದ ಒಳಗಿನ ಆಸಕ್ತ ಯುವಜನರು ಸಹಾಯಕ ನಿರ್ದೇಶಕರ ಕಚೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೆ.ಎಚ್. ಪಾಟೀಲ ಕ್ರೀಡಾಂಗಣ, ಗದಗ ಇವರ ಕಾರ್ಯಾಲಯದಲ್ಲಿ ಅರ್ಜಿಯನ್ನು ಪಡೆದುಕೊಂಡು, ಆರ್.ಡಿ. ಸಂಖ್ಯೆಯುಳ್ಳ ಪರಿಶಿಷ್ಟ ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಪ್ರತಿ, ಪದವಿ ಅಂಕಪಟ್ಟಿಯೊಂದಿಗೆ ಅರ್ಜಿಯನ್ನು ಭರ್ತಿ ಮಾಡಿ ಜನವರಿ 18ರೊಳಗಾಗಿ ಸಹಾಯಕ ನಿರ್ದೇಶಕರು, ಯು.ಸ.& ಕ್ರೀಡಾ ಇಲಾಖೆ, ಗದಗ ಇವರಿಗೆ ಸಲ್ಲಿಸಬಹುದಾಗಿದೆ.

ಸ್ವೀಕೃತವಾಗುವ ಅರ್ಜಿಗಳನ್ನು ಕೇಂದ್ರ ಕಚೇರಿಗೆ ಮುಂದಿನ ಆಯ್ಕೆ ಪ್ರಕ್ರಿಯೆಗಾಗಿ ಕಳುಹಿಸಲಾಗುವುದು. ಆಯ್ಕೆಯಾದವರಿಗೆ ಊಟೋಪಹಾರ, ಪ್ರಮಾಣ ಪತ್ರ ಹಾಗೂ ಹೊರ ಜಿಲ್ಲೆಗಳಿಂದ ಭಾಗವಹಿಸುವ ಯುವತಿಯರಿಗೆ ಸಾಮಾನ್ಯ ವಸತಿ ವ್ಯವಸ್ಥೆಯನ್ನು ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08372-238345ಗೆ ಸಂಪರ್ಕಿಸಬಹುದಾಗಿದೆ.

# ಗುಡ್ಡದ ಒಡೆಯ ಅಯ್ಯಪ್ಪ ಸ್ವಾಮಿಯ ಮಹಾಪೂಜೆ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಇಲ್ಲಿನ ಡಂಬಳ ಗ್ರಾಮದ ಗುಡ್ಡದ ಒಡೆಯ ಅಯ್ಯಪ್ಪ ಸ್ವಾಮಿ ಸನ್ನಿದಾನದಲ್ಲಿ ಮಹಾಪೂಜೆ ಮತ್ತು ಅಗ್ನಿ ಪ್ರವೇಶ ಕಾರ್ಯಕ್ರಮ ಜರುಗಿತು.

ಡಂಬಳ ಗ್ರಾಮದ ಡೋಣಿ ರಸ್ತೆಯ ಹತ್ತಿರದ ರಂಗಮಂದಿರದಲ್ಲಿ ಗದಗ ನಗರದ ಮಂಜು ಗುರುಸ್ವಾಮಿ ಇವರ ಶಿಷ್ಯರಾದ ಯಲ್ಲಪ್ಪ ಗುರುಸ್ವಾಮಿ ನೇತೃತ್ವದಲ್ಲಿ ಪೂಜೆ ನೆರವೇರಿಸಲಾಯಿತು. ರಾತ್ರಿ ಅಯ್ಯಪ್ಪಸ್ವಾಮಿಯ ಭಾವಚಿತ್ರವನ್ನು



ಸಿಂಗರಿಸಿ, 18 ಮೆಟ್ಟಿಲುಗಳನ್ನು ನಿರ್ಮಿಸಿ, ಪಡಿ ಪೂಜೆ ನೆರವೇರಿಸಿದರು. ಅಯ್ಯಪ್ಪಸ್ವಾಮಿ ಮಾಲಾಧಾರಿಗಳು ಸುಡುವ ಎಣ್ಣೆಯಲ್ಲಿ ಕೈ ಅದ್ದಿ ಅಗ್ನಿ ಪ್ರವೇಶ ಮಾಡಿದರು. ಮಾಳಿಂಗರಾಯ ಡೊಳ್ಳಿನ ಜನಪದ ಕಲಾತಂಡದವರಿಂದ ಡೊಳ್ಳಿನ ಪದಗಳು ಜರುಗಿದವು.

ಬಸುರಾಜ ಯಲಭೋವಿ, ಮೌನೇಶ ಪತ್ತಾರ, ಮಂಜುನಾಥ ಹೆಬ್ಬಳ್ಳಿ, ಮಳ್ಳಪ್ಪ ಕದಡಿ, ಮಾರುತಿ ಕಣಕಿ, ಮಂಜುನಾಥ ಬಾರಕೇರ, ಹನಮಂತ ಹರಿಜನ, ಪ್ರಜ್ವಲ್ಲ ಕಾಶಭೋವಿ, ಹನುಮಂತಪ್ಪ ಕಣಕಿ, ಸುದೀಪ ಮೇವುಂಡಿ ಸೇರಿ ಸುತ್ತಮುತ್ತಲಿನ ಗ್ರಾಮಗಳ ಅಯ್ಯಪ್ಪಸ್ವಾಮಿ ಮಾಲಾಧಾರಿಗಳಿದ್ದರು.

# ಬೇಂದ್ರೆ ಕಾವ್ಯದಿಂದ ಹೊಸ ಅನುಭೂತಿ

▶▶ ಮೊದಲನೇ ಪುಟದಿಂದ

ಸಮರಸವೇ ಜೀವನ ಎಂದು ಬದುಕನ್ನು ಎದೆಗಪ್ಪಿಕೊಂಡು ಅರಳಿದ ಕಾವ್ಯಚೇತನ ಬೇಂದ್ರೆ. ಇವರ ಕಾವ್ಯ ಪ್ರೇರಣೆಗೆ ಅಂಬೂತಾಯಿಯೇ ಅವರ ಬದುಕಿನ ಮೊದಲ ಪ್ರೇರಕ ಶಕ್ತಿ. ರಸ ಋಷಿ, ಶ್ರೇಷ್ಠ ಕವಿ, ಶಬ್ದ ಗಾರುಡಿಗ ಹೀಗೆ ಬಹುವಿಧವಾಗಿ ಸಹೃದಯರಿಂದ ಗೌರವಿಸಲ್ಪಟ್ಟ ಬೇಂದ್ರೆಯವರ ಕಾವ್ಯ ಕನ್ನಡ ಭಾಷೆ ಹಾಗೂ ಸಾಹಿತ್ಯಗಳನ್ನು ಶ್ರೀಮಂತಗೊಳಿಸಿದೆ ಎಂದರು.

ದತ್ತಿ ದಾನಿಗಳಾದ ಪ್ರೊ.ಸಿದ್ದಲಿಂಗೇಶ ಸಜ್ಜನಶೆಟ್ಟರ ಅಯ್ಯಪ್ಪ ಸೋಮಪ್ಪ ಸಜ್ಜನರ ಅವರ ಕಾಯಕ ಜೀವನವನ್ನು ವಿವರಿಸಿದರು. ಶಿಕ್ಷಣಾಧಿಕಾರಿಗಳಾಗಿ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ಕಾಯಕದ ಜೊತೆಗೆ ಬೆಳವಣಕಿ ಗ್ರಾಮದಲ್ಲಿ ಶಿಕ್ಷಣ ಸಂಸ್ಥೆಯೊಂದನ್ನು ಸ್ಥಾಪಿಸಿ ಗ್ರಾಮೀಣ ಪರಿಸರದ ಮಕ್ಕಳ ಬಾಳಿಗೆ ಬೆಳಕಾದ ಪರಿಯನ್ನು ತಿಳಿಸಿದರು.

ಶಾಂತಲಾ ಹಂಚಿನಾಳ, ಹರ್ಷವರ್ಧನ ಬೇಂದ್ರೆಯವರ ಕವನಗಳ ಗಾಯನ ಜರುಗಿತು. ವೇದಿಕೆ ಮೇಲೆ ಡಾ. ಶೇಖರ ಸಜ್ಜನ ಉಪಸ್ಥಿತರಿದ್ದರು. ಕಿಶೋರಬಾಬು ನಾಗರಕಟ್ಟಿ ಸ್ವಾಗತಿಸಿದರು. ಪ್ರೊ. ಬಸವರಾಜ ನೆಲಜೇರಿ ನಿರೂಪಿಸಿದರು. ಶಿವಾನಂದ ಗಿಡ್ನಂದಿ ವಂದಿಸಿದರು.

ಕಾರ್ಯಕ್ರಮದಲ್ಲಿ ಪ್ರೊ. ಕೆ.ಎಚ್. ಬೇಲೂರ, ಪ್ರೊ. ಚಂದ್ರಶೇಖರ ವಸ್ತ್ರದ, ಡಾ. ರಾಜಶೇಖರ ದಾನರಡ್ಡಿ ವಿ.ಪಿ. ಬಿಂಕದಕಟ್ಟಿ ಶಶಿಕಾಂತ ಕೊರ್ಲಹಳ್ಳಿ, ಎಸ್.ಜೆ. ಪಾಟೀಲ, ಡಾ. ರಾಜೇಂದ್ರ ಗಡಾದ, ಶೇಕಣ್ಣ ಕಳಸಾಪುರಶೆಟ್ರು, ಬಿ.ಕೆ. ಆಸ್ಕಿ, ಬಿ.ಎಸ್. ಹಿಂಡಿ, ಎಂ.ಎಚ್. ಸವದತ್ತಿ, ರತ್ನಕ್ಕ ಪಾಟೀಲ, ಮಂಜುಳಾ ವೆಂಕಟೇಶಯ್ಯ, ಎಸ್.ಎಂ. ಕಾತರಕಿ, ರತ್ನಾ ಪುರಂತರ, ಶೈಲಜಾ ಗಿಡ್ನಂದಿ, ಸಿ.ಎಂ. ಮಾರನಬಸರಿ, ಎಸ್.ಎಫ್. ಭಜಂತ್ರಿ, ಶಶಿಕಾಂತ ಕೊರ್ಲಹಳ್ಳಿ, ವನಮಾಲಾ ಮಾನಶೆಟ್ಟಿ, ಅರುಣಾ ಹಳಕಟ್ಟಿ, ಇಂದಿರಾ ಆಸಂಗಿ, ಶೃತಿ ಅನುಪಮಾ ಲಕ್ಷ್ಮೇಶ್ವರಮಠ, ಎಸ್.ಜಿ. ಅಮಿನಭಾವಿ, ಡಾ.ನಾಗರಾಜ ಸಜ್ಜನರ, ಈರನಗೌಡ ಮಣಕವಾಡ, ಶಿವರಾಜ ಸಜ್ಜನಶೆಟ್ಟರ್, ಶಂಕರಗೌಡ ಪಾಟೀಲ, ಎಂ.ಎಚ್. ಹುಲ್ಲೂರ, ವಿ.ಆರ್. ಪೂಜಾರ, ಶಂಕರ ನಾಯಕ್, ಕೆ.ಜಿ. ವ್ಯಾಪಾರಿ, ಪ್ರೊ. ವಿ.ಎಸ್. ದಲಾಲಿ, ರತ್ನಾ ಫಾರ್ಗಿ, ಸುಧಾ ಬಳ್ಳಿ, ಆಯ್.ಎಂ. ರಾಜೇಖಾನ, ರಾಜೇಶ್ವರಿ ಸಜ್ಜನಶೆಟ್ಟರ, ಶಾಂತಮ್ಮ ಹಾಲಣ್ಣವರ, ಆರ್.ಡಿ. ಕಪ್ಪಲಿ, ಡಿ.ಜಿ. ಕುಲಕರ್ಣಿ, ಎನ್.ಎಸ್. ಹೊನ್ನೂರ, ಬಿ.ಬಿ. ಹೂಗಾರ, ಅಶೋಕ ಸತ್ಯರಡ್ಡಿ, ಬಿ.ಎಸ್. ಬಣಕಾರ, ಎಂ.ಎಂ. ಶೆಟವಾಜಿ, ಪಾರ್ವತಿ ಬೇವಿನಮರದ, ಅಕ್ಕಮಹಾದೇವಿ ಪಾರ್ವತಿಮಠ, ಮಲ್ಲಪ್ಪ ಡೋಣಿ ಮುಂತಾದವರು ಉಪಸ್ಥಿತರಿದ್ದರು.

## ಕೊಲನಪಾಕ ಸ್ವಯಂಭು ಶ್ರೀ ಸೋಮೇಶ್ವರ ಕ್ಷೇತ್ರದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು


# ಶ್ರೀ ರೇಣುಕಾಚಾರ್ಯರು ಸಕಲರ ಹಿತ ಬಯಸಿದರು

■ ವಿಜಯಸಾಕ್ಷಿ ಸುದ್ದಿ, ಕೊಲನಪಾಕ (ತೆಲಂಗಾಣ)

ವಿಶ್ವ ಬಂಧುತ್ವ ಮತ್ತು ಸಾಮರಸ್ಯವನ್ನು ಬೋಧಿಸಿದ ವೀರಶೈವ ಧರ್ಮ ಸಂಸ್ಕೃತಿಯ ಪುನರುತ್ಥಾನ ಹಾಗೂ ಬೆಳವಣಿಗೆಗಾಗಿ ಈ ಜೀವ ಯಾವಾಗಲೂ ಮುಡಿಪಾಗಿದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಕೊಲನಪಾಕ ಸ್ವಯಂಭು ಶ್ರೀ ಸೋಮೇಶ್ವರ ಕ್ಷೇತ್ರದಲ್ಲಿ ತಮ್ಮ 68ನೇ ಜನ್ಮ ದಿನೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಸಕಲರಿಗೂ ಸದಾ ಹಿತವನ್ನೇ ಬಯಸಿದ ಶ್ರೀ ಜಗದ್ಗುರು ರೇಣುಕಾಚಾರ್ಯರು ಅವತರಿಸಿದ ಪುಣ್ಯ ತಾಣ. ಧರ್ಮ ಸೂರ್ಯರಾದ ಅವರು ಸರ್ವ ಸಮುದಾಯದ ಉನ್ನತಿ ಮತ್ತು ಶ್ರೇಯೋಭಿವೃದ್ಧಿಗಾಗಿ ಸದಾ ಶ್ರಮಿಸಿದ್ದನ್ನು ಎಂದಿಗೂ ಮರೆಯಲಾಗದು. ಅವರ ದೂರದೃಷ್ಟಿ ಮತ್ತು ಭಾವೈಕ್ಯತೆಯ ವಿಚಾರಧಾರೆಗಳು ಮಾನವ ಕುಲಕೋಟಿಗೆ ದಾರಿ ದೀಪ. ಜಾತಿಗಿಂತ ನೀತಿ, ತತ್ವಕ್ಕಿಂತ ಆಚರಣೆ, ಮಾತಿಗಿಂತ ಕೃತಿ, ಬೋಧನೆಗಿಂತ ಸಾಧನೆ, ದಾನಕ್ಕಿಂತ ದಾಸೋಹ, ಚರಿತ್ರೆಗಿಂತ ಚಾರಿತ್ರ್ಯ ದೊಡ್ಡದೆಂದು ಸಾರಿದ ಕೀರ್ತಿ ಶ್ರೀ ಜಗದ್ಗುರು ರೇಣುಕಾಚಾರ್ಯರಿಗೆ ಸಲ್ಲುತ್ತದೆ. ಈ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯಬೇಕೆಂಬ ಸಂಕಲ್ಪ ನಮ್ಮದಾಗಿದೆ ಎಂದರು.




ಸಮಾರಂಭ ಉದ್ಘಾಟಿಸಿದ ಕರ್ನಾಟಕ ರಾಜ್ಯದ ವೈದ್ಯಕೀಯ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಡಾ. ಶರಣ ಪ್ರಕಾಶ ಮಾತನಾಡಿ, ಈ ಜಗತ್ತಿಗೆ ವೀರಶೈವ ಧರ್ಮ ಕೊಟ್ಟ ಕೊಡುಗೆ ಅಪಾರ. ಶ್ರೀ ಜಗದ್ಗುರು ರೇಣುಕಾಚಾರ್ಯರ ಧಾರ್ಮಿಕ ಮತ್ತು ಸಾಮಾಜಿಕ ಚಿಂತನೆಗಳು ಸದಾ ಕಾಲಕ್ಕೂ ಸರ್ವರಿಗೂ ಹಿತಕಾರಿಯಾಗಿದೆ. ಶ್ರೀ ರಂಭಾಪುರಿ ಜಗದ್ಗುರುಗಳ ನಿರಂತರ ಶ್ರಮ ಸಾಧನೆ ಅಪೂರ್ವವಾದುದೆಂದರು.

ವಿಜ್ಞಾನ-ತಂತ್ರಜ್ಞಾನ ಹಾಗೂ ಸಣ್ಣ ನೀರಾವರಿ ಸಚಿವ ಎನ್.ಎಸ್. ಭೋಸರಾಜ ಮಾತನಾಡಿ, ಅತ್ಯಂತ ಪ್ರಾಚೀನ ಕ್ಷೇತ್ರ ಇದಾಗಿದ್ದು ಸ್ವಯಂಭು ಶ್ರೀ ಸೋಮೇಶ್ವರ ಮತ್ತು ಚಂಡಿಕಾಂಬಾ ಅಮ್ಮನವರ ಶಕ್ತಿ ಸಾಮರ್ಥ್ಯ ಅಮೂಲ್ಯವಾದುದು. ಶ್ರೀ ರಂಭಾಪುರಿ ಜಗದ್ಗುರುಗಳವರ ಮಾರ್ಗದರ್ಶನದಲ್ಲಿ ಈ ಕ್ಷೇತ್ರ ಸಂಪೂರ್ಣ ಅಭಿವೃದ್ಧಿಯಾಗಬೇಕೆಂಬುದು ನಮ್ಮೆಲ್ಲರ ನಿಲುವು ಆಗಬೇಕಾಗಿದೆ. ನಮ್ಮಿಂದ ಮತ್ತು ಸರ್ಕಾರದಿಂದ ವಿಶೇಷ ಸಂಪನ್ಮೂಲಗಳನ್ನು ದೊರಕಿಸಿಕೊಡಲು ತೆಲಂಗಾಣ ರಾಜ್ಯದ ಸರಕಾರ ಮುಂದಾಗಬೇಕಿದೆ ಎಂದರು.

ಸಮಾರಂಭದಲ್ಲಿ 45ಕ್ಕೂ ಹೆಚ್ಚು ಜನ ಮಠಾಧೀಶರು ಪಾಲ್ಗೊಂಡಿದ್ದರು. ಸಿದ್ಧರಬೆಟ್ಟ ವೀರಭದ್ರ ಶ್ರೀ ಹಾಗೂ ಅಮ್ಮಿನಭಾವಿ ಅಭಿನವ ಶಾಂತಲಿಂಗ ಶ್ರೀಗಳು ನುಡಿ ನಮನ ಸಲ್ಲಿಸಿದರು. ಮಾಜಿ ಸಂಸದ ಮಂಜುನಾಥ ಕುನ್ನೂರ, ಶಿವಶರಣಪ್ಪ ಸೀರಿ, ಗುರುಪಾದಪ್ಪ ಕಿಣಗಿ,

ಆಲೇರು ಶಾಸಕ ಬಿರ್ಲಾ ಐಲಯ್ಯ ಮತ್ತು ಭುವನಗಿರಿ ಶಾಸಕ ಅನಿತಕುಮಾರ ರೆಡ್ಡಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು. ಮೇಹಕರ ಹಿರೇಮಠದ ರಾಜೇಶ್ವರ ಶ್ರೀಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಎಮ್ಮಿಗನೂರು ವಾಮದೇವ ಮಹಂತ ಶಿವಾಚಾರ್ಯರು ಮಾತನಾಡಿ, ಕೊಲನಪಾಕ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರೀ ರಂಭಾಪುರಿ ಜಗದ್ಗುರುಗಳು ಶ್ರಮಿಸುತ್ತಿರುವುದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಶಿವಾದ್ವೈತ ಸಿದ್ಧಾಂತದ ಅರಿವು ನಮಗೆ ಉಂಟಾದಾಗ ಮಾನವ ಜೀವನ ಸಾರ್ಥಕಗೊಳ್ಳುವುದೆಂದರು.

ಅಮೃತಪ್ಪ ಮಲಕಪ್ಪ ಗೌಡ, ದಯಾನಂದ ಶೀಲವಂತ, ಎಸ್.ಬಿ. ಹಿರೇಮಠ ಸೇರಿದಂತೆ ಕ್ಷೇತ್ರಾಭಿವೃದ್ಧಿ ಟ್ರಸ್ಟಿನ ಎಲ್ಲಾ ಪದಾಧಿಕಾರಿಗಳು ಇದ್ದರು. ಎಂ. ವೀರಮಲ್ಲೇಶ ಹಾಗೂ ಅಣ್ಣಾರಾವ ಬಿರಾದಾರ ಶ್ರೀ ರಂಭಾಪುರಿ ಜಗದ್ಗುರುಗಳಿಗೆ ಗೌರವ ಮಾಲಾರ್ಪಣೆ ಮಾಡಿದರು.

ನ್ಯಾಯವಾದಿ ವಿಜಯಕುಮಾರ ಹೇರೂರ ಸ್ವಾಗತಿಸಿದರು. ಶಿವಮೊಗ್ಗದ ಶಾಂತಾ ಆನಂದ ಅವರಿಂದ ಭಕ್ತಿ ಗೀತೆ ಜರುಗಿತು. ದೇವಾಪುರ ಶಿವಮೂರ್ತಿ ಶಿವಾಚಾರ್ಯರು ನಿರೂಪಿಸಿದರು.

# ಒಗ್ಗಟ್ಟಿನಿಂದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು




■ ವಿಜಯಸಾಕ್ಷಿ ಸುದ್ದಿ, ಗದಗ

ಯುವಕರಿಗೆ ಸೂಕ್ತ ರೀತಿಯ ತರಬೇತಿ ನೀಡಿದರೆ ಏನನ್ನಾದರೂ ಸಾಧಿಸಬಲ್ಲರು ಎಂಬುದಕ್ಕೆ ಎನ್‌ಎಸ್‌ಎಸ್ ಶಿಬಿರಗಳು ಸಾಕ್ಷಿಯಾಗಬಲ್ಲವು. ಶಿಬಿರದಲ್ಲಿ ನಡೆದಿರುವ ಎಲ್ಲಾ ಚಟುವಟಿಕೆಗಳು ಜೀವಂತಿಕೆ ಪಡೆಯಬೇಕಾದರೆ ಶಿಬಿರಾರ್ಥಿಗಳು ಚಾಚೂ ತಪ್ಪದೇ ದೈನಂದಿನ ಬದುಕಿನಲ್ಲಿ ಅವುಗಳನ್ನು ಅನುಸರಿಸಬೇಕಾದ ಅಗತ್ಯವಿದೆ ಎಂದು ಕೆ.ಎನ್. ದೇಸಾಯಿ ಅಭಿಪ್ರಾಯಪಟ್ಟರು.

ಅವರು ಪಂಡಿತ ಪಂಚಾಕ್ಷರ ಗವಾಯಿಗಳವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ವಾರ್ಷಿಕ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಹಿರಿಯರಾದ ಇಮಾಮ ಹುಸೇನ ರೋಣದ ಮಾತನಾಡಿ, ಒಗ್ಗಟ್ಟನ್ನು ಮೂಡಿಸುವಲ್ಲಿ ಗುರುಗಳ ಮಾರ್ಗದರ್ಶನ ಅಗತ್ಯ. ಶಿಬಿರಾರ್ಥಿಗಳು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿದರೆ ಯಾವುದೇ ಕಾರ್ಯ ಯಶಸ್ವಿಯಾಗಬಲ್ಲದು. 7 ದಿನಗಳ ಕಾಲ ನಮ್ಮ ಕಾಲೋನಿಯಲ್ಲಿ ಶ್ರಮದಾನ ಸಮೀಕ್ಷೆ, ಸಾಂಸ್ಕೃತಿಕ ಚಟುವಟಿಕೆಗಳು ಜನರಲ್ಲಿ ಜಾಗೃತಿ ಉಂಟು ಮಾಡಿವೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಚಾರ್ಯ ಜಿ.ಎಸ್. ಯತ್ನಟ್ಟಿ ವಹಿಸಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸೇವಾಮನೋಭಾವನೆ ಕಲಿಕೆಯೊಂದಿಗೆ ಬೆಳೆಯುವುದು ಅತ್ಯಗತ್ಯ. ಅಂದಾಗ ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವ ರೂಪುಗೊಳ್ಳುತ್ತ ಹೋಗುತ್ತದೆ ಎಂದರು.

ವೇದಿಕೆಯಲ್ಲಿ ಕಾಲೋನಿಯ ಹಿರಿಯರಾದ ಪರಶುರಾಮ ಘೋರ್ಪಡೆ, ಮಹಾವಿದ್ಯಾಲಯದ ಸಿಬ್ಬಂದಿಗಳಾದ ಸುಭಾಸ ಓಂಕಾ, ಬಸವರಾಜ ದೇ.ಕುಂಬಾರ, ಮಹಾಂತೇಶ ಘೋಲಪ್ಪನವರ ಉಪಸ್ಥಿತರಿದ್ದರು. ವ್ಹಿ.ಎ. ನಿಂಗೋಜಿ ಸ್ವಾಗತಿಸಿದರೆ, ಶಿಬಿರದ ಅಧಿಕಾರಿ ಪ್ರೊ. ಎಂ.ಎನ್. ಹೊಂಬಾಳೆ ವರದಿ ವಾಚಿಸಿದರು.

ಶಿಬಿರಾರ್ಥಿಗಳಾದ ಮಧುರಾಜ ಬಳ್ಳಾರಿ, ಮರಿಸ್ವಾಮಿ, ಸುನೀಲ, ಸಿ.ಯು. ಗಿರಡ್ಡಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಪ್ರೊ. ಕವಿತಾ ಬಡಿಗೇರ ನಿರ್ವಹಿಸಿದರೆ, ಕೊನೆಗೆ ಶಿಬಿರಾರ್ಥಿ ಮಂಜುನಾಥ ಬಡಿಗೇರ ವಂದನಾರ್ಪಣೆಗೈದರು.

# ರಸ್ತೆ ಕಾಮಗಾರಿಗೆ ಭೂಮಿಪೂಜೆ



■ ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ವಾರ್ಡ್ ನಂ.12ರ ಬೆಳಗಲಿಯವರ ಮನೆಯಿಂದ ಜೆ.ಟಿ. ಕಾಲೇಜ್ ಮುಂಭಾಗ ಎಸ್.ಬಿ.ಐ. ಎಟಿಎಂವರೆಗಿನ ರಸ್ತೆ ಕಾಮಗಾರಿಯ ಭೂಮಿಪೂಜೆಯನ್ನು ಗದಗ-ಬೆಟಗೇರಿ ನಗರಸಭೆ ಸದಸ್ಯೆ ವಿಜಯಲಕ್ಷ್ಮೀ ಶಶಿಧರ ದಿಂಡೂರ ದಂಪತಿಗಳು ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ವಿಜಯಲಕ್ಷ್ಮೀ ದಿಂಡೂರ, ಕಳೆದ 25 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಈ ರಸ್ತೆಯನ್ನು ನಗರಸಭೆ ವತಿಯಿಂದ ಸಿ.ಸಿ. ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ನಗರಸಭೆಯ ಅನುದಾನದಲ್ಲಿ ವಾರ್ಡಿನಲ್ಲಿ ಚರಂಡಿ, ಬೀದಿದೀಪ, ರಸ್ತೆ ಅಭಿವೃದ್ಧಿ ಸೇರಿದಂತೆ ಇನ್ನುಳಿದ ಅಭಿವೃದ್ಧಿ ಕಾರ್ಯಗಳನ್ನು ಹಂತ ಹಂತವಾಗಿ ಮಾಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಶಶಿಧರ ದಿಂಡೂರ, ವಿಜಯಕುಮಾರ ಬೆಳಗಲಿ ದಂಪತಿಗಳು, ಗಂಗಾಧರ ಹಾದಿಮನಿ, ಮಂಜುನಾಥ ಹಾದಿಮನಿ, ವಸಂತ ಜೋಶಿ, ವಿಜಯಕುಮಾರ ಗೋಣೀ, ಸಾಬನಗೌಡ ದೋಬಲ, ಪ್ರಕಾಶ ಹಿತ್ತಲಮನಿ, ಮಂಜುನಾಥ ಡಂಬಳ, ಬಸವರಾಜ ನರೇಗಲ್ಲ, ಬಸವರಾಜ ಚಲವಾದಿ, ಜಾಫರ ಕರಡಿ, ಯೇಸು ಶೆಟಿಗಾರ ಉಪಸ್ಥಿತರಿದ್ದರು.

# ಬೇಕರ್ ಹ್ಯೂಸ್ ಕಂಪನಿಯಿಂದ ರೈತರಿಗಾಗಿ ಕಾರ್ಯಾಗಾರ

■ ವಿಜಯಸಾಕ್ಷಿ ಸುದ್ದಿ, ಗದಗ

ಹುಲಕೋಟಿಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ರೈತರು ಮತ್ತು ವಿದ್ಯಾರ್ಥಿಗಳಿಗೆ ಮಣ್ಣಿನ ಸಂರಕ್ಷಣೆ, ರೈತರಿಂದ ಮಣ್ಣು ಪರೀಕ್ಷೆ ಮತ್ತು ಮಣ್ಣಿನ ಗುಣಮಟ್ಟ ಹೆಚ್ಚಿಸುವ ಕುರಿತು ಸಂವಾದಾತ್ಮಕ ಕಾರ್ಯಾಗಾರ ಮತ್ತು ತರಬೇತಿ ಕಾರ್ಯಕ್ರಮ ನಡೆಯಿತು.

ಮಿಶ್ರ ಬೆಳೆ ವಿಧಾನಗಳನ್ನು ಬಳಸಿ ಮತ್ತು ಸ್ಥಳೀಯವಾಗಿ ಮಣ್ಣಿನ ಪರೀಕ್ಷೆಯನ್ನು ಬಳಸಿಕೊಂಡು ಕೃಷಿಯ ಮೂಲಕ ತಮ್ಮ ಮಣ್ಣನ್ನು ಹೇಗೆ ಸುಧಾರಿಸಬಹುದು ಎಂಬುದನ್ನು ರೈತರಿಗೆ ತಿಳಿಸಲಾಯಿತು. ಬೆಂಗಳೂರಿನ ಬೇಕರ್ ಹ್ಯೂಸ್ ಕಂಪನಿ ಈ ಕಾರ್ಯಕ್ರಮವನ್ನು ಆಯೋಜಿಸಿತ್ತು.



ಕಾರ್ಯಕ್ರಮದಲ್ಲಿ ಗದಗ ಜಿಲ್ಲೆಯ 200 ರೈತರು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಮಾರಂಭದ ಬಳಿಕ ಸಂತಸ ವ್ಯಕ್ತಪಡಿಸಿದ ರೈತರು, ಜಿಲ್ಲೆಯಲ್ಲಿ ಬರಗಾಲದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರು ಹೆಚ್ಚಿನ ಸಲಹೆ-ಸೂಚನೆಗಳನ್ನು ನೀಡಿ ಸಹಕರಿಸುವಂತೆ ಸಂಬಂಧಪಟ್ಟವರಿಗೆ ತಿಳಿಸಿದರು.

ಸ್ಥಳೀಯವಾಗಿ ದೊರೆಯುವ ಕೆಲವು ವಸ್ತುಗಳಿಂದ ಮಣ್ಣಿನ ಉತ್ಪಾದಕತೆಯನ್ನು ಹೆಚ್ಚಿಸಬಹುದಾಗಿದ್ದು, ಇಂತಹ ಅಧಿವೇಶನ ಸಹಕಾರಿಯಾಗಲಿದೆ ಎಂಬುದು ಎಲ್ಲರಿಗೂ ಸಂತಸ ತಂದಿದೆ ಎಂದು ಅಧಿವೇಶನದಲ್ಲಿ ಉಪಸ್ಥಿತರಿದ್ದ ಕೆಲ ರೈತರು ಅಭಿಪ್ರಾಯಪಟ್ಟರು.

ಬೇಕರ್ ಹ್ಯೂಸ್ ಎನರ್ಜಿ ಟೆಕ್ನಾಲಜಿ ಸೆಂಟರ್‌ನ ಹಿರಿಯ ತಂತ್ರಜ್ಞಾನ ನಿರ್ದೇಶಕ ಅಶೋಕ್ ರೋಡ್ಡಿ ಮಾತನಾಡಿ, ಸಕಾರಾತ್ಮಕ ಬದಲಾವಣೆಯನ್ನು ತರಲು ನಾವು ಕೆಲಸ ಮಾಡುವ ಮತ್ತು ವಾಸಿಸುವ ಸಮುದಾಯಗಳಲ್ಲಿ ಸುಸ್ಥಿರ ಉಪಕ್ರಮಗಳು ಮತ್ತು ಶಿಕ್ಷಣವನ್ನು ಬೆಂಬಲಿಸಲು ನಮಗೆ ಹೆಮ್ಮೆಯಿದೆ. ಕೃಷಿ ಪರಿಸರ ಅಭ್ಯಾಸಗಳನ್ನು ಬೆಳೆಸುವ ಮೂಲಕ, ನಾವು ಹೆಚ್ಚು ಸಮರ್ಥನೀಯ ಮತ್ತು ಚೇತರಿಸಿಕೊಳ್ಳುವ ಕೃಷಿ ವ್ಯವಸ್ಥೆಯನ್ನು ಉತ್ತೇಜಿಸಬಹುದು ಎಂದರು.

# ಜಾಗೃತಿ ಸಮಾವೇಶದ ಪೂರ್ವಭಾವಿ ಸಭೆ ಇಂದು

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ, ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಇವರ ಸಂಯುಕ್ತಾಶ್ರಯದಲ್ಲಿ ಸಂವಿಧಾನ, ಸಾಮಾಜಿಕ ನ್ಯಾಯ, ಸಹಬಾಳ್ವೆ ಮತ್ತು ಸ್ವಾಭಿಮಾನದ ಸಂರಕ್ಷಣೆಗಾಗಿ ಚಿತ್ರದುರ್ಗದಲ್ಲಿ ಜ.28ರಂದು ಬೆಳಿಗ್ಗೆ 11 ಗಂಟೆಗೆ ಶ್ರೀ ಶ್ರೀ ಶ್ರೀ ಬಸವಮೂರ್ತಿ ಮಾದರ ಚನ್ನಯ್ಯ ಪೀಠದ ಪಕ್ಕದ ಮೈದಾನದಲ್ಲಿ 'ಶೋಷಿತರ ಜಾಗೃತಿ ಸಮಾವೇಶ' ನಡೆಯಲಿದೆ.

ಈ ಕುರಿತು ಜ.9ರಂದು ಬೆಳಿಗ್ಗೆ 10.30ಕ್ಕೆ ನಗರದ ಕನಕ ಭವನದಲ್ಲಿ ಪೂರ್ವಭಾವಿ ಸಭೆ ನಡೆಯಲಿದ್ದು, ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ ವಾದ) ರಾಜ್ಯ ಸಮಿತಿ ಪ್ರಧಾನ



ಸಂಚಾಲಕ ಮಾವಳ್ಳಿ ಶಂಕರ ಆಗಮಿಸಲಿದ್ದು, ಜಿಲ್ಲಾ ಪ್ರಧಾನ ಸಂಚಾಲಕ ಬಾಲರಾಜ ಅರಬರ, ಜಿಲ್ಲಾ ಸಂಘಟನಾ ಸಂಚಾಲಕ ನಾಗರಾಜ ಗೋಕಾವಿ, ಮುತ್ತಪ್ಪ ಭಜಂತ್ರಿ, ಹೊನ್ನಪ್ಪ ಸಾಕಿ, ಪ್ರಕಾಶ ಕಮಡೊಳ್ಳಿ, ಮಾರುತಿ ಅಂಗಡಿ, ಪೂಜಾ ಬೇವೂರ, ರವಿ ನೀಡಗುಂದಿ, ಕೆಂಚಪ್ಪ ಮ್ಯಾಗೇರಿ, ಪ್ರಕಾಶ ಭಜಂತ್ರಿ, ಮಂಜುನಾಥ ಮಾತಿನ, ಮುತ್ತು ಒಂಟೆತ್ತಿನ ಮುಂತಾದವರು ಸ್ವಾಗತ ಕೋರಿದ್ದಾರೆ.

# ಇಂತಹ ಹುಚ್ಚು ಅಭಿಮಾನ ಬಿಟ್ಟುಬಿಡಿ

▶▶ ಮೊದಲನೇ ಪುಟದಿಂದ

ಈಗಾಗಲೇ ಕೊರೋನಾ ಮಹಾಮಾರಿ ಮತ್ತೆ ವ್ಯಾಪಿಸುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ದಿನನಿತ್ಯ ವರದಿಯಾಗುತ್ತಿದೆ. ನಾನು ಜನ್ಮದಿನ ಆಚರಿಸದೇ ಇರುವ ನಿರ್ಧಾರ ಮಾಡಲು ಈ ವರದಿಗಳೇ ಕಾರಣ.

ಇದೇ ಕಾರಣಕ್ಕೆ, ಮತ್ತೆ ಏನೇನೋ ಸಮಸ್ಯೆಗಳಾಗುವುದು ಬೇಡ ಎಂದೇ ಎಂದು ಜನ್ಮದಿನ ಆಚರಿಸಿಕೊಂಡಿಲ್ಲ. ನಾನು ಹೆಂಡತಿ ಮಕ್ಕಳೊಂದಿಗೆ ಗೋವಾ ಪ್ರವಾಸದಲ್ಲಿದ್ದೆ. ಈ ಸುದ್ದಿ ಕೇಳಿದಾಕ್ಷಣ ಮನಸ್ಸಿಗೆ ಬಹಳ ನೋವಾಯಿತು. ಈ ಘಟನೆಯಿಂದ ನನಗೆ ಬರ್ತ್‌ಡೇ ಅಂದ್ರೆ ಭಯ, ಅಸಹ್ಯ ಬಂದುಬಿಟ್ಟಿದೆ. ಕಳೆದ ವರ್ಷ ಮನೆಯ ಬಳಿ ಅಭಿಮಾನಿಗಳು ಬೆಂಕಿ ಹಚ್ಚಿಕೊಂಡಿದ್ದರು ಎಂದು ಎಂದು ವಿಷಾದ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಯಶ್ ಅಭಿಮಾನಿ ಬಳಗದ ಗದಗ ಜಿಲ್ಲಾಧ್ಯಕ್ಷ ಮಂಜುನಾಥ್ ದಾಮೋದರ್ ಸೇರಿದಂತೆ ಪದಾಧಿಕಾರಿಗಳು ಇದ್ದರು.

# ಡಾ. ಬಿ.ಎನ್. ಹೊರಪೇಟಿಗೆ 'ಸಿದ್ಧಶ್ರೀ' ಪ್ರಶಸ್ತಿ ಪ್ರದಾನ



■ ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ತಾಲೂಕಿನ ಮೋರನಹಳ್ಳಿ ಗ್ರಾಮದ ಡಾ. ಬಿ.ಎನ್. ಹೊರಪೇಟಿ ಅವರು ಸಿನೆಮಾ, ಸಾಹಿತ್ಯ, ಸಂಘಟನೆ, ಸಮಾಜ ಸೇವೆಯಲ್ಲಿ ವಿಶೇಷವಾಗಿ ಗುರುತಿಸಿಕೊಂಡು ಸಮಾಜದ ಎಲೆಮರೆಯ ಪ್ರತಿಭೆಗಳನ್ನು ಮುಖ್ಯವಾಹಿನಿಗೆ ಪರಿಚಯಿಸುವಲ್ಲಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಬಿ.ಎನ್. ಹೊರಪೇಟಿ ಅವರು ಹಳ್ಳಿಯಿಂದ ದಿಲ್ಲಿವರೆಗೂ ಎನ್ನುವಂತೆ ರಾಜ್ಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿಯನ್ನು ಸ್ವೀಕರಿಸಿದ್ದು ಹೆಮ್ಮೆಯ ಸಂಗತಿ.

ಇವರ ಸೇವೆಯನ್ನು ಗುರುತಿಸಿ ಕರ್ನಾಟಕ ಸೋಷಿಯಲ್ ಕ್ಲಬ್ ಹಾಗೂ ಚೇತನ ಫೌಂಡೇಶನ್ ಕರ್ನಾಟಕ ಅವರು ಧಾರವಾಡದ ಕನ್ನಡ ಸಾಹಿತ್ಯ ಪರಿಷತ್ತು ಸಭಾಂಗಣದಲ್ಲಿ ಆಯೋಜಿಸಿದ್ದ ಸಿದ್ದೇಶ್ವರ ಸ್ವಾಮಿಗಳ ಗುರುನಮನ ಕಾರ್ಯಕ್ರಮದಲ್ಲಿ ಡಾ. ಬಿ.ಎನ್. ಹೊರಪೇಟಿ ಅವರಿಗೆ 2024ನೇ ಸಾಲಿನ ಪ್ರತಿಷ್ಠಿತ 'ಸಿದ್ಧಶ್ರೀ' ಪ್ರಶಸ್ತಿ ನೀಡಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ನಾಡಿನ ಹರಗುರು ಚರ ಮೂರ್ತಿಗಳು, ಸಂಘಟಕರಾದ ಚಂದ್ರಶೇಖರ ಮಾಡಲಗೇರಿ ಉಪಸ್ಥಿತರಿದ್ದರು.

# ಜ.22ರಂದು ರಾಜ್ಯದ ದೇವಾಲಯಗಳಲ್ಲಿ ವಿಶೇಷ ಪೂಜೆ: ಸರ್ಕಾರದ ನಡೆ ಸ್ವಾಗತಿಸಿದ ಬಿಜೆಪಿ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಉತ್ತರ ಪ್ರದೇಶದ ಅಯೋಧ್ಯೆಯ ರಾಮ ಮಂದಿರದಲ್ಲಿ ಜನವರಿ 22ರಂದು ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮ ನಡೆಯಲಿದ್ದು, ಈ ಸಂದರ್ಭದಲ್ಲಿ ರಾಜ್ಯದ ಎಲ್ಲಾ ದೇವಾಲಯಗಳಲ್ಲೂ ವಿಶೇಷ ಪೂಜೆ ನೆರವೇರಿಸುವಂತೆ ರಾಜ್ಯ ಸರ್ಕಾರದ ನಿರ್ಧಾರವನ್ನು ಬಿಜೆಪಿ ಸ್ವಾಗತಿಸಿದೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಸಿಟಿ ರವಿಯವರು, ಇದು ಉತ್ತಮ ನಿರ್ಧಾರ. ಇದಕ್ಕೆ ಸರ್ಕಾರಕ್ಕೆ ಧನ್ಯವಾದಗಳನ್ನು ಹೇಳುತ್ತೇವೆ.

ಹಲವು ವರ್ಷಗಳ ಬಳಿಕ ಕಾಂಗ್ರೆಸ್ ಪಕ್ಷಕ್ಕೆ ಇದೀಗ ಬುದ್ಧಿ ಬಂದಿದೆ. ರಾಮ ಎಲ್ಲರಿಗೂ ಸೇರಿದವನಾಗಿದ್ದಾನೆ. ರಾಮನನ್ನು ತೊರೆದಿದ್ದ ಕಾಂಗ್ರೆಸ್ ಇದೀಗ ರಾಮನ ಬಳಿಗೆ ಬರುತ್ತಿದೆ. ಇದು ಒಳ್ಳೆಯದು. ದೇಶಕ್ಕೂ ಒಳ್ಳೆಯದಾಗುತ್ತದೆ ಎಂದು ಹೇಳಿದ್ದಾರೆ.

**ಶುಭಾಶಯ ಕೋರಿದ ಪ್ರಧಾನಿ ಮೋದಿ**

## ಬಾಂಗ್ಲಾದೇಶ ಪ್ರಧಾನಿಯಾಗಿ 4ನೇ ಬಾರಿ ಶೇಖ್ ಹಸೀನಾ ಆಯ್ಕೆ



**■ವಿಜಯಸಾಕ್ಷಿ ಸುದ್ದಿ, ನವದೆಹಲಿ**

ಬಾಂಗ್ಲಾದೇಶದಲ್ಲಿ ಭಾನುವಾರ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ದಾಖಲೆಯ ಸತತ ನಾಲ್ಕನೇ ಅವಧಿಗೆ ಪ್ರಧಾನಿಯಾದ ಶೇಖ್ ಹಸೀನಾ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಅಭಿನಂದಿಸಿದ್ದಾರೆ ಮತ್ತು ನೆರೆಯ ದೇಶದೊಂದಿಗೆ ತನ್ನ ದ್ವಿಪಕ್ಷೀಯ ಸಂಬಂಧವನ್ನು ಇನ್ನಷ್ಟು ಬಲಪಡಿಸಲು ಭಾರತ ಬದ್ಧವಾಗಿದೆ ಎಂದು ತಿಳಿಸಿದ್ದಾರೆ.

"ಪ್ರಧಾನಿ ಶೇಖ್ ಹಸೀನಾ ಅವರೊಂದಿಗೆ ಮಾತನಾಡಿದ್ದೇನೆ ಮತ್ತು ಸಂಸತ್ ಚುನಾವಣೆಯಲ್ಲಿ ಐತಿಹಾಸಿಕ ನಾಲ್ಕನೇ ಬಾರಿಗೆ ಗೆಲುವು ಸಾಧಿಸಿದ ಅವರನ್ನು ಅಭಿನಂದಿಸಿದ್ದೇನೆ" ಎಂದು ಪ್ರಧಾನಿ ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

"ಚುನಾವಣೆಗಳನ್ನು ಯಶಸ್ವಿಯಾಗಿ ನಡೆಸಿದ್ದಕ್ಕಾಗಿ ನಾನು ಬಾಂಗ್ಲಾದೇಶದ ಜನರನ್ನು ಅಭಿನಂದಿಸುತ್ತೇನೆ. ಬಾಂಗ್ಲಾದೇಶದೊಂದಿಗೆ ನಮ್ಮ ನಿರಂತರ ಮತ್ತು ಜನಕೇಂದ್ರಿತ ಪಾಲುದಾರಿಕೆಯನ್ನು ಇನ್ನಷ್ಟು ಬಲಪಡಿಸಲು ನಾವು ಬದ್ಧರಾಗಿದ್ದೇವೆ" ಎಂದು ಪ್ರಧಾನಿ ಹೇಳಿದ್ದಾರೆ.

ಬಾಂಗ್ಲಾದೇಶದ ಆಡಳಿತಾರೂಢ ಅವಾಮಿ ಲೀಗ್ ಚುನಾವಣೆಯಲ್ಲಿ ಶೇಕಡ 50ಕ್ಕಿಂತ ಹೆಚ್ಚು ಸ್ಥಾನಗಳನ್ನು ಗೆದ್ದಿದೆ ಎಂದು ಚುನಾವಣಾ ಆಯೋಗದ ವಕ್ತಾರ ಹೇಳಿದ್ದಾರೆ. ಈ ಮೂಲಕ ಶೇಖ್ ಹಸೀನಾ ನಾಲ್ಕನೇ ಅವಧಿಗೆ ಅಧಿಕಾರ ಉಳಿಸಿಕೊಂಡಿದ್ದಾರೆ.

**ಚಿತ್ರನಟ ಯಶ್ ಜನ್ಮದಿನದ ಕಟೌಟ್ ಅಳವಡಿಸುವಾಗ ವಿದ್ಯುತ್ ಸ್ಪರ್ಶ | ಮೂವರು ಯುವಕರ ದಾರುಣ ಸಾವು**

# ಅಭಿಮಾನ ತಂದ ದುರಂತ ಅಂತ್ಯ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಚಿತ್ರನಟ ಯಶ್ ಜನ್ಮದಿನದ ಹಿನ್ನೆಲೆಯಲ್ಲಿ ಬೃಹತ್ ಕಟೌಟ್ ಅಳವಡಿಸುವ ವೇಳೆ ಅಚಾತುರ್ಯದಿಂದ ವಿದ್ಯುತ್ ಸ್ಪರ್ಶವಾಗಿ ಮೂವರು ಹುಚ್ಚು ಅಭಿಮಾನಿಗಳು ಸ್ಥಳದಲ್ಲಿಯೇ ಸಾವನ್ನಪ್ಪಿ, ಮೂವರು ಆಸ್ಪತ್ರೆ ಸೇರಿದ ದಾರುಣ ಘಟನೆ ಲಕ್ಷ್ಮೇಶ್ವರ ತಾಲೂಕಿನ ಸೂರಣಗಿ ಗ್ರಾಮದಲ್ಲಿ ಭಾನುವಾರ ಸಂಭವಿಸಿದೆ.

ಸೂರಣಗಿ ಗ್ರಾಮದ ಹನಮಂತ ಮಜ್ಜೂರಪ್ಪ ಹರಿಜನ(20), ಮುರಳಿ ನೀಲಪ್ಪ ನಡುವಿನಮನಿ (20) ನವೀನ ನೀಲಪ್ಪ ಹರಿಜನ(20) ಮೃತಪಟ್ಟ ದುರ್ದೈವಿಗಳಾಗಿದ್ದು ಹನಮಂತ ಹರಿಜನ, ಪ್ರಕಾಶ ಮ್ಯಾಗೇರಿ, ಮಂಜು ಹರಿಜನ ಗಾಯಗೊಂಡಿದ್ದಾರೆ. ಭಾನುವಾರ ರಾತ್ರಿ ಲಕ್ಷ್ಮೇಶ್ವರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಸೋಮವಾರ ಬೆಳಿಗ್ಗೆ ಜಿಮ್ಸ್‌ಗೆ ದಾಖಲಿಸಲಾಗಿದ್ದು, ಇವರೆಲ್ಲರೂ ಚೇತರಿಸಿಕೊಂಡಿದ್ದಾರೆ.

**ಘಟನೆ ವಿವರ:** ಪ್ರತಿವರ್ಷ ಜ.8 ರಂದು ನಟ ಯಶ್ ಅವರ ಜನ್ಮದಿನಾಚರಣೆಯನ್ನು ಸೂರಣಗಿ ಗ್ರಾಮದಲ್ಲಿ ಅವರ ಅಭಿಮಾನಿಗಳು ವಿಜೃಂಭಣೆಯಿಂದ ಆಚರಿಸುತ್ತಾರೆ. ಈ ಹಿನ್ನೆಲೆಯಲ್ಲಿ ಹಿಂದಿನ ದಿನ ರಾತ್ರಿಯೇ ಗ್ರಾಮದ 8-10 ಜನ ಯುವಕರು ಪ್ರಮುಖ ಸ್ಥಳದಲ್ಲಿ ಯಶ್ ಅವರ 20 ಅಡಿ ಎತ್ತರದ ಕಟೌಟ್ ಕಟ್ಟುವ ಕಾರ್ಯದಲ್ಲಿ ತೊಡಗಿದ್ದರು. ಕಬ್ಬಿಣದ ಫ್ರೇಮ್ ಹೊಂದಿದ್ದ ಕಟೌಟ್ ವಿದ್ಯುತ್ ತಂತಿಗೆ ತಗುಲಿದ್ದರಿಂದ ವಿದ್ಯುತ್ ಹರಿದು ಸ್ಥಳದಲ್ಲಿಯೇ 3 ಜನರು ಒದ್ದಾಡಿ ಮೃತಪಟ್ಟಿದ್ದಾರೆ.

> ಯಶ್ ಅವರ ಕಟೌಟ್ ಕಟ್ಟುವ ವೇಳೆ ನಡೆದ ಘಟನೆಯಿಂದ ಆತ್ಮೀಯ ಗೆಳೆಯರ ಸಾವು ನಮ್ಮಲ್ಲಿ ನೋವನ್ನುಂಟು ಮಾಡಿದೆ. ಯಶ್ ಬಗ್ಗೆ ಅವರಿಗೆ ಅಪಾರವಾದ ಪ್ರೀತಿಯಿತ್ತು. ನಟ ಯಶ್ ಅವರು ಮೃತ ಗೆಳೆಯರ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಬೇಕು. ನವೀನ ಮತ್ತು ಮುರಳಿ ಪ್ರಾಣ ಸ್ನೇಹಿತರಾಗಿದ್ದರು. ಜೀವನುದ್ದಕ್ಕೂ ಒಂದಾಗಿದ್ದ ಅವರು ಸಾವಿನಲ್ಲೂ ಒಂದಾದರು. ಗೆಳೆಯರ ಕುಟುಂಬಕ್ಕೆ ಭಗವಂತ ನೋವು ಸಹಿಸುವ ಶಕ್ತಿ ಕೊಡಲಿ.
>
> **- ಪ್ರಕಾಶ ಮ್ಯಾಗೇರಿ.**
> ಗಾಯಾಳು ಯುವಕ.



**ಕುಟುಂಬಸ್ಥರ ಆಕ್ರಂದನ:** ಮೃತಪಟ್ಟ 3 ಜನ ಯುವಕರು ಕೂಲಿ ಕೆಲಸ ಮಾಡುತ್ತಿದ್ದು, ಇವರ ದುಡಿಮೆಯೇ ಕುಟುಂಬಕ್ಕೆ ಆಧಾರವಾಗಿತ್ತು. ತಮ್ಮ ನೆಚ್ಚಿನ ನಟನ ಮೇಲಿನ ಹುಚ್ಚು ಅಭಿಮಾನಕ್ಕೆ ದುರಂತ ಸಾವು ತಂದುಕೊಂಡಿದ್ದಾರೆ. ಈ ದೃಶ್ಯವನ್ನು ಕಣ್ಣಾರೆ ಕಂಡ ಪಾಲಕರು, ಗೆಳೆಯರು, ಸಂಬಂಧಿಕರು ರಾತ್ರಿಯಿಡೀ ಮಮ್ಮಲ ಮರುಗಿದ್ದಾರೆ. ಲಕ್ಷ್ಮೇಶ್ವರದ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ಮೂವರು ಯುವಕರ ಕಳೆಬರಹಕ್ಕೆ ಸಾಮೂಹಿಕ ಅಂತ್ಯಕ್ರಿಯೆ ನೆರವೇರಿಸಲಾಯಿತು. ಈ ವೇಳೆ ಹೆತ್ತವರ ಆಕ್ರಂದನ ಮುಗಿಲು ಮುಟ್ಟಿತ್ತಲ್ಲದೆ, ಇಡೀ ಗ್ರಾಮದಲ್ಲಿ ಸೂತಕದ ವಾತಾವರಣ ಮನೆ ಮಾಡಿತ್ತು.

ಆಸ್ಪತ್ರೆಗೆ ಬೇಟಿ ನೀಡಿದ ಶಾಸಕ ಡಾ.ಚಂದ್ರು ಲಮಾಣಿ, ಮುಖಂಡರಾದ ಕೋಟೆಪ್ಪ ವರ್ದಿ, ವಿಜಯ ಹಳ್ಳಿ ಅವರಿಂದ ಘಟನೆ ಮಾಹಿತಿ ಪಡೆದರು. ಗಾಯಾಳುಗಳನ್ನು ವಿಚಾರಿಸಿ ಹೆಚ್ಚಿನ ಚಿಕಿತ್ಸೆಗೆ ಜಿಮ್ಸ್‌ಗೆ ಕಳುಹಿಸಲು ಸೂಚಿಸಿದರು. ಬಳಿಕ ಸೂರಣಗಿ ಗ್ರಾಮಕ್ಕೆ ತೆರಳಿ, ಮೃತರ ಪಾಲಕರಿಗೆ ಸಾಂತ್ವನ ಹೇಳಿ ಈ ಘಟನೆ ಅತ್ಯಂತ ನೋವಿನದ್ದಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ ಮೃತ ಯುವಕರ ಕುಟುಂಬಕ್ಕೆ ಸರ್ಕಾರದಿಂದ ಪರಿಹಾರ ಕಲ್ಪಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಹೇಳಿ ವೈಯಕ್ತಿಕವಾಗಿ 20 ಸಾವಿರ ರೂ ಸಹಾಯಧನ ನೀಡಿದರು.

> ಕುಟುಂಬಕ್ಕೆ ಆಧಾರವಾಗಿದ್ದ ಯುವಕರ ಸಾವಿನಿಂದ ಕುಟುಂಬಗಳು ಅನಾಥವಾಗಿವೆ. ಇದರಲ್ಲಿ ಮೃತ ಮುರಳಿ ಎಂಬಾತ ಒಬ್ಬನೇ ಮಗನಾಗಿದ್ದ. ಘಟನೆಯ ಬಳಿಕ ಶಾಸಕರು, ಜಿಲ್ಲಾಧಿಕಾರಿಗಳು, ಪೊಲೀಸ್, ಆರೋಗ್ಯ ಇಲಾಖೆ, ಗ್ರಾಮ ಪಂಚಾಯಿತಿ ಸ್ಪಂದಿಸಿದೆ. ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್.ಕೆ.ಪಾಟೀಲ ಜವಾಬ್ದಾರಿ ವಹಿಸಿ, ಮುಖ್ಯಮಂತ್ರಿಗಳಿಂದ ಮೃತ ಕುಟುಂಬಕ್ಕೆ ತಲಾ 2 ಲಕ್ಷ ರೂ. ಮತ್ತು ಗಾಯಗೊಂಡವರಿಗೆ 50 ಸಾವಿರ ರೂ ಪರಿಹಾರ ಕಲ್ಪಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ.
>
> **- ಕೋಟೆಪ್ಪ ವರ್ದಿ.**
> ಸಮುದಾಯದ ಮುಖಂಡ.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಅವರು ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿ, ಘಟನೆಯ ಬಗ್ಗೆ ಸಚಿವರಾದ ಹೆಚ್.ಕೆ. ಪಾಟೀಲ ಅವರು ಸಂಪೂರ್ಣ ವರದಿ ಪಡೆದು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ತಕ್ಷಣಕ್ಕೆ ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂ, ಗಾಯಗೊಂಡವರಿಗೆ 50 ಸಾವಿರ ರೂ ಪರಿಹಾರ ಕಲ್ಪಿಸಿದ್ದಾರೆ. ಇನ್ನಷ್ಟು ಪರಿಹಾರ, ಅನಕೂಲ ಕಲ್ಪಿಸುವ ಕೆಲಸ ಮಾಡುತ್ತೇವೆ ಎಂದರು.

ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡರ ಅವರು ಇಡೀ ದಿನ ಸ್ಥಳದಲ್ಲಿದ್ದು ಪರಿಸ್ಥಿತಿ ನಿಭಾಯಿಸಿದರಲ್ಲದೆ, ಘಟನೆಯ ಸಂಪೂರ್ಣ ವರದಿ ಕಲೆಹಾಕಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗುವುದೆಂದರು. ಅಂತ್ಯ ಸಂಸ್ಕಾರಕ್ಕೆ ಗ್ರಾಮ ಪಂಚಾಯಿತಿಯಿಂದ ಕುಟುಂಬಕ್ಕೆ ತಲಾ 5 ಸಾವಿರ ರೂ ಸಹಾಯಧನ ನೀಡಿದರು.

**ಸನ್ಮಾರ್ಗ ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಡಾ. ಬಸವರಾಜ ಬೊಮ್ಮನಹಳ್ಳಿ**

## ಸಾಧಕನಿಗೆ ಆತ್ಮವಿಶ್ವಾಸ, ಸತತ ಪರಿಶ್ರಮ ಅಗತ್ಯ

**■ವಿಜಯಸಾಕ್ಷಿ ಸುದ್ದಿ, ಗದಗ**

ವಿದ್ಯಾರ್ಥಿಗಳಲ್ಲಿ ಗುರಿ ಇರುವುದು ನಿಜವಾದರೂ, ಅದರ ಸಾಧನೆಗೆ ಬೇಕಾದ ಅವಶ್ಯಕ ಮಾರ್ಗದಲ್ಲಿ ನಡೆದಾಗ ಮಾತ್ರ ಗುರಿ ತಲುಪಿ ಯಶಸ್ಸಿನ ಶಿಖರದ ತುದಿಯನ್ನು ತಲುಪಲು ಸಾಧ್ಯ ಎಂದು ಗದಗ ವೈದ್ಯಕೀಯ ವಿಜ್ಞಾನ ಮಹಾವಿದ್ಯಾಲಯ (ಜಿಮ್ಸ್) ನಿರ್ದೇಶಕ ಡಾ. ಬಸವರಾಜ ಬೊಮ್ಮನಹಳ್ಳಿ ಅಭಿಪ್ರಾಯಪಟ್ಟರು.

ನಗರದ ಸನ್ಮಾರ್ಗ ಪದವಿಪೂರ್ವ ಕಾಲೇಜಿನ ಪ್ರಸಕ್ತ ಶೈಕ್ಷಣಿಕ ವರ್ಷದ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಮಾತನಾಡಿದ ಅವರು, ಸಾಧಕನಿಗೆ ಆತ್ಮ ವಿಶ್ವಾಸ, ನಿರಂತರ ಪರಿಶ್ರಮ ಅಗತ್ಯ ಎಂದರು.

ಸಂಸ್ಥೆಯ ಅಧ್ಯಕ್ಷ ಪ್ರೊ. ರಾಜೇಶ ಕುಲಕರ್ಣಿ ಮಾತನಾಡಿ, ಸಂಸ್ಥೆಯ ಹಾಗೂ ಕಾಲೇಜಿನ ಗಮನಾರ್ಹ ಬೆಳವಣಿಗೆಗೆ ಇಲ್ಲಿನ ಆಡಳಿತ ಮಂಡಳಿ, ಸಿಬ್ಬಂದಿ, ವಿದ್ಯಾರ್ಥಿ ಹಾಗೂ ಪಾಲಕ ವರ್ಗದ ಕೊಡುಗೆಗೆ ಧನ್ಯವಾದ ತಿಳಿಸಿದರು.



ಸಮಾರಂಭದಲ್ಲಿ ಸಾಂದರ್ಭಿಕವಾಗಿ ಮಾತನಾಡಿದ ಆಡಳಿತ ಮಂಡಳಿಯ ಸದಸ್ಯ ಪ್ರೊ. ರೋಹಿತ್ ಒಡೆಯರ್, ವಿವೇಕಾನಂದರ ಹಾಗೂ ಸದ್ಗುರು ಅವರ ಉಕ್ತಿಗಳನ್ನು ಉಲ್ಲೇಖಿಸುತ್ತಾ ವಿದ್ಯಾರ್ಥಿಗಳಲ್ಲಿ ಸಮಯಪ್ರಜ್ಞೆ, ಮನೋದೃಢತೆ ಇರಲಿ ಎಂದರು.

> ಗದಗ ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೃಷ್ಣಗೌಡ ಪಾಟೀಲ ಮಾತನಾಡಿ, ಕೇವಲ ವಿದ್ಯಾಲಯದ ಕಟ್ಟಡವನ್ನು ಗಮನಿಸದೇ ಅಲ್ಲಿರುವ ಶೈಕ್ಷಣಿಕ ವಾತಾವರಣವನ್ನು ಗಮನಿಸಿ ಛಲ, ಶ್ರದ್ಧೆಯಿಂದ ಅಧ್ಯಯನಗೈದಾಗ ವಿದ್ಯಾರ್ಥಿಗಳಿಗೆ ಸಾಧನೆ ಸಾಧ್ಯ. ಮೊಬೈಲ್ ಮುಂತಾದ ಸಮಾಜಿಕ ಮಾಧ್ಯಮಗಳಿಂದ ಸಾಧ್ಯವಾದಷ್ಟು ದೂರವಿದ್ದರೆ ನಿಮ್ಮ ಜೀವನ ಸುಗಮವಾಗುವುದು ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಪ್ರೊ. ಪ್ರೇಮಾನಂದ ರೋಣದ, ವಿದ್ಯಾರ್ಥಿಗಳು ನಕಾರಾತ್ಮಕ ಧೋರಣೆಯನ್ನು ತ್ಯಜಿಸಿ, ಸಕಾರಾತ್ಮಕ ಭಾವನೆಗಳನ್ನು ಒಗ್ಗೂಡಿಸಿಕೊಂಡು, ಉತ್ತಮ ಸಂಸ್ಕಾರ, ಸಂಸ್ಕೃತಿಯೊಂದಿಗೆ ಸನ್ಮಾರ್ಗದತ್ತ ಮುನ್ನಡೆಯಲಿ ಎಂದು ಆಶಿಸಿದರು.

ಅನುಷಾ ಆಲೂರ ಹಾಗೂ ಸಂಗಡಿಗರು ನೃತ್ಯಗೈದರು. ಹಿರಿಯ ಉಪನ್ಯಾಸಕ ಪ್ರೊ. ಮುರಲೀಧರ ಸಂಕನೂರ ಕಾರ್ಯಕ್ರಮ ನಿರೂಪಿಸಿದರು. ಉಪನ್ಯಾಸಕ ಪ್ರೊ. ಹೆಚ್.ಎಸ್. ದಳವಾಯಿ ಅತಿಥಿಗಳನ್ನು ಸ್ವಾಗತಿಸಿ ಪರಿಚಯಿಸಿದರು. ಆಡಳಿತಾಧಿಕಾರಿ ಎಮ್.ಸಿ. ಹಿರೇಮಠ ವಂದಿಸಿದರು.

ಸಮಾರಂಭದಲ್ಲಿ ಸಂಸ್ಥೆಯ ನಿರ್ದೇಶಕರಾದ ಪ್ರೊ. ಉಡುಪಿ ದೇಶಪಾಂಡೆ, ಪ್ರೊ. ರಾಹುಲ್ ಒಡೆಯರ್, ಪ್ರೊ. ಸಯ್ಯದ್ ಮತೀನ್ ಮುಲ್ಲಾ, ಬೋಧಕ-ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ವಾರ್ಡ್ ನಂ. 13ರಲ್ಲಿ ಶ್ರೀರಾಮ ಮಂದಿರ ಅಕ್ಷತೆ ವಿತರಣೆ



**■ವಿಜಯಸಾಕ್ಷಿ ಸುದ್ದಿ, ಗದಗ**

ಜ.22ರಂದು ಅಯೋಧ್ಯೆಯಲ್ಲಿ ಶ್ರೀ ರಾಮ ಮಂದಿರ ಉದ್ಘಾಟನೆಗೊಳ್ಳುತ್ತಿರುವ ನಿಮಿತ್ತ ಇಲ್ಲಿನ ವಾರ್ಡ್ ನಂ. 13ರ ಸದಸ್ಯ ಮುತ್ತು ಮುಶಿಗೇರಿ ನೇತೃತ್ವದಲ್ಲಿ ಮನೆ ಮನೆಗೆ ತೆರಳಿ ಶ್ರೀ ರಾಮಮಂದಿರದ ಕರಪತ್ರ, ಅಕ್ಷತೆಯನ್ನು ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುತ್ತು ಮುಶಿಗೇರಿ, 500 ವರ್ಷಗಳಿಂದ ಹಿಂದೂಗಳ ಆರಾಧ್ಯ ದೇವರಾದ ಶ್ರೀರಾಮನ ಮಂದಿರ ನಿರ್ಮಾಣ ಪೂರ್ಣಗೊಂಡು ಜ.22ರಂದು ಉದ್ಘಾಟನೆಗೊಳ್ಳುತ್ತಿದೆ. ಈ ದಿನ ಭಾರತ ಮತ್ತು ಇಡೀ ಪ್ರಪಂಚಾದ್ಯಂತ ಇರುವ ಹಿಂದೂಗಳಿಗೆ ಅತ್ಯಂತ ಸಂಭ್ರಮದ ದಿನವಾಗಿದ್ದು, ಅಂದಿನ ದಿನ ಮನೆ ಮನೆಯಲ್ಲಿ ಕನಿಷ್ಠ ಐದು ದೀಪಗಳನ್ನು ಹಚ್ಚುವ ಮೂಲಕ ಸಂಭ್ರಮವನ್ನು ಆಚರಿಸಬೇಕೆಂದರು.

ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಉದ್ಘಾಟನೆಯ ನೇರ ಪ್ರಸಾರವನ್ನು ವೀಕ್ಷಿಸಲು ರೇಲ್ವೆ ಕ್ವಾಟ್ರಸ್‌ನ ಗಣಪತಿ ದೇವಸ್ಥಾನದಲ್ಲಿ ಎಲ್‌ಇಡಿ ಪರದೆಯ ವ್ಯವಸ್ಥೆ ಮಾಡಲಾಗಿದ್ದು, ವಾರ್ಡ್ ನಂ.13ರ ಸಾರ್ವಜನಿಕರು ಈ ಸಂಭ್ರಮವನ್ನು ಕಣ್ತುಂಬಿಕೊಳ್ಳಬೇಕೆಂದು ವಿನಂತಿಸಿದರು.

## ಗಾಲಿ ಜನಾರ್ಧನ ರೆಡ್ಡಿ ಆಶೀರ್ವಾದ ಪಡೆದ ವೆಂಕಟೇಶ್ ಇಳಿಗೇರ್



**■ವಿಜಯಸಾಕ್ಷಿ ಸುದ್ದಿ, ಕೊಪ್ಪಳ**

ಇತ್ತೀಚೆಗೆ ಕಲ್ಯಾಣ ರಾಜ್ಯ ಪ್ರಗತಿ ಪಕ್ಷ ಮೊದಲನೇ ಹಂತದ ಜಿಲ್ಲಾ ಮತ್ತು ತಾಲೂಕು ಘಟಕಗಳ ಪದಾಧಿಕಾರಿಗಳನ್ನು ನೇಮಿಸಲಾಗಿದೆ.

ರಾಜ್ಯ ಉಪಾಧ್ಯಕ್ಷ ಮನೋಹರ ಗೌಡ ಹೇರೂರು ನೇತೃತ್ವದಲ್ಲಿ ಕೊಪ್ಪಳ ಜಿಲ್ಲಾ ಅಧ್ಯಕ್ಷ ಸಂಗಮೇಶ ಬಾದವಾಡಗಿ ಪದಾಧಿಕಾರಿಗಳ ಆಯ್ಕೆಯ ಸಮಯದಲ್ಲಿ ಗಂಗಾವತಿ ತಾಲೂಕು ಅಧ್ಯಕ್ಷರನ್ನಾಗಿ ವೆಂಕಟೇಶ್ ಇಳಿಗೇರ್ ಇವರನ್ನು ನೇಮಿಸಿ ಆದೇಶ ಹೊರಡಿಸಿದ್ದರು.

ಸಂಸ್ಥಾಪಕ ರಾಜ್ಯಾಧ್ಯಕ್ಷ ಗಾಲಿ ಜನಾರ್ಧನ ರೆಡ್ಡಿ ಅವರ ಸೂಚನೆಯ ಮೇರೆಗೆ ವೆಂಕಟೇಶ್ ಇಳಿಗೆರ್ ಅವರನ್ನು ಗಂಗಾವತಿ ತಾಲೂಕ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ನೂತನ ತಾಲೂಕ ಅಧ್ಯಕ್ಷರಾಗಿ ನೇಮಕವಾದ ವೆಂಕಟೇಶ್ ಇಳಿಗೇರ್ ಮತ್ತು ಬೆಂಬಲಿಗರಾದ ಶರಣಯ್ಯ ವೀರಾಪುರ, ನಿಂಗಪ್ಪ ಗದ್ದಿಗೇರಿ, ನೂರೇಶ್ ಪವಾರ್, ವೆಂಕಟೇಶ್ ಬೋವಿ, ಶರಣಪ್ಪ ಕೊಡದಾಳ್, ಇವರೊಂದಿಗೆ ಬೆಂಗಳೂರಿನ ಜನಾರ್ಧನ ರೆಡ್ಡಿಯವರ ಗೃಹ ಕಚೇರಿಗೆ ಭೇಟಿ ನೀಡಿ ಅವರ ಆಶೀರ್ವಾದ ಪಡೆದ ವೆಂಕಟೇಶ್ ಇಳಿಗೇರ್ ಮಾತನಾಡಿ, ರಾಜ್ಯಾಧ್ಯಕ್ಷರು ನಮಗೆ ಹೆಚ್ಚಿನ ಜವಾಬ್ದಾರಿಯನ್ನು ನೀಡಿದ್ದಾರೆ ಇನ್ನು ಮೇಲೆ ಪಕ್ಷದ ಹಿರಿಯರ ಮಾರ್ಗದರ್ಶನದಲ್ಲಿ ಅವರೊಂದಿಗೆ ಬೂತ್ ಮಟ್ಟದಲ್ಲಿ ಪಕ್ಷವನ್ನು ಬಲಪಡಿಸುತ್ತೇವೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಲಾಢ್ಯವಾಗಿ ಕಲ್ಯಾಣ ರಾಜ್ಯ ಪ್ರಗತಿ ಪಕ್ಷ ಬೆಳೆಯಲಿದೆ ಎಂದು ಹೇಳಿದರು.

## ಬಾಲ್ಯ ಸ್ನೇಹಿತನನ್ನು ಸಚಿವರಿಗೆ ಪರಿಚಯಿಸಿದ ಹೊರಟ್ಟಿ

**■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ**

ವಿಶಾಲ ಹೃದಯದವರಿಗೆ ಲೋಕವೇ ಕುಟುಂಬ, ನಗು ಮೊಗದ ವ್ಯಕ್ತಿಗೆ ಪ್ರಪಂಚದಲ್ಲೆಲ್ಲಾ ಸ್ನೇಹಿತರು. ಇಂಥವರ ಸಾಲಿಗೆ ಮೊದಲಿಗರಾಗಿ ಇರುವ ಸಭಾಪತಿ ಬಸವರಾಜ ಹೊರಟ್ಟಿ ಅವರು ಸ್ನೇಹವೇ ಸಂಪತ್ತು ಎಂದು ಭಾವಿಸಿದವರು.

ಇತ್ತೀಚಿಗೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾದ ಮಧು ಬಂಗಾರಪ್ಪನವರು ಹೊರಟ್ಟಿ ಅವರ ತವರೂರಾದ ಯಡಹಳ್ಳಿಯಲ್ಲಿ ದೇಶದಲ್ಲೇ ಮಾದರಿಯಾದ ಶಾಲೆಯನ್ನು ತಮ್ಮ ತಂದೆವರಾದ ಶಿವಲಿಂಗಪ್ಪನವರ ಸ್ಮರಣಾರ್ಥ ಸಮಾಜಕ್ಕೆ ನೀಡಿದ್ದಾರೆ.

ಈ ಶಾಲೆಯನ್ನು ವೀಕ್ಷಿಸಲು ಸಚಿವರು ಹೋದ ಸಂದರ್ಭದಲ್ಲಿ ಅಪಾರ ಜನಜಂಗುಳಿಯಲ್ಲಿ ಹೊರಟ್ಟಿ ಅವರು ತನ್ನ ಬಾಲ್ಯ ಸ್ನೇಹಿತನನ್ನ ಅಪ್ಪಿಕೊಂಡು ಪ್ರಾಥಮಿಕ ಶಾಲೆಯಲ್ಲಿ ಕಲಿಯುತ್ತಿರುವಾಗ ನನ್ನ ಕ್ಲಾಸ್‌ಮೇಟ್ ಈತ ಎಂದು ಅಡಿವಪ್ಪ ಸೀತವ್ವ ಗೋಳನನ್ನು ಸಚಿವರಿಗೆ ಪರಿಚಯಿಸಿದ್ದು, ಸಭಾಪತಿಗಳ ಸರಳತೆಗೆ ಸಾಕ್ಷಿಯಾಗಿತ್ತು.



## ನೂತನ ಪದಾಧಿಕಾರಿಗಳ ಪ್ರಮಾಣವಚನ ಸ್ವೀಕಾರ ಇಂದು



**■ವಿಜಯಸಾಕ್ಷಿ ಸುದ್ದಿ, ಗದಗ**

ಬೆಟಗೇರಿಯ ಹಿಂದೂ ಸವಿತಾ ಸಮಾಜ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಜ.9ರ ಸಾಯಂಕಾಲ 5.30ಕ್ಕೆ ನೂತನ ಪದಾಧಿಕಾರಿಗಳ ಪ್ರಮಾಣವಚನ ಸ್ವೀಕಾರ ನಡೆಯಲಿದೆ.

ದೇವಸ್ಥಾನದ ಟ್ರಸ್ಟ ಕಮಿಟಿಯ ನೂತನ ಅಧ್ಯಕ್ಷರಾಗಿ ಗಂಗಣ್ಣ ನಾಗಪ್ಪ ಗೌಡರ, ಉಪಾಧ್ಯಕ್ಷರಾಗಿ ಸತೀಶ ಹನಮಂತಪ್ಪ ರಾಂಪೂರ, ಪ್ರಧಾನ ಕಾರ್ಯದರ್ಶಿಯಾಗಿ ಮಧುರಾಜ್ ಮಲ್ಲೇಶಪ್ಪ ರಾಂಪೂರ, ಸಹ ಕಾಯದರ್ಶಿಯಾಗಿ ವೆಂಕಟೇಶ ಬಳ್ಳಾರಿ, ಖಜಾಂಚಿಯಾಗಿ ನಾಗರಾಜ ಗೌಡರ ಹಾಗೂ ಸದಸ್ಯರಾಗಿ ವೆಂಕಟೇಶ ದೇವೆಂದ್ರಪ್ಪ ರಾಂಪೂರ, ಸಂಜಯ ರಾಂಪೂರ, ವೆಂಕಟೇಶ ಗೌಡರ, ಅಶೋಕ ವಲ್ಲೂರ, ಶೇಷ ಗಿರಿಧರ ರಾಂಪೂರ, ಶೇಖರ ನ್ಯಾವಿ ಪ್ರಮಾಣವಚನ ಸ್ವೀಕರಲಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಯುವಕ ಮಂಡಳದ ನೂತನ ಅಧ್ಯಕ್ಷರಾಗಿ ಶ್ರೀಧರ ರಘುನಾಥನಹಳ್ಳಿ ಪ್ರಮಾಣವಚನ ಸ್ವೀಕರಿಸಲಿದ್ದಾರೆಂದು ಪ್ರಧಾನ ಕಾರ್ಯದರ್ಶಿ ಮಧುರಾಜ್ ಎಮ್.ರಾಂಪೂರ ತಿಳಿಸಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka